ಆಂತರಿಕ ಪ್ರಸಾರಕ್ಕಾಗಿ ಮಾತ್ರ

ECHOES INDIA

ಶ್ರೀ ರಾಮಚಂದ್ರ ಮಿಷನ್®

ಸೆಪ್ಟೆಂಬರ್ 2014 ಸಂಪುಟ 7 ಸಂಚಿಕೆ 5

# ಮಣಪಾಕ್ಕಂನಿಂದ ವಾರ್ತೆಗಳು

## ಜುಲೈ 2014

**ಜುಲೈ 4, ಶುಕ್ರವಾರ: ದ್ವಾರಕಾ ವಸತಿ ಸಮುಚ್ಚಯಕ್ಕೆ ಭೇಟಿ:** ಶೀತಜ್ವರದಿಂದ ಒಂದು ವಾರದಿಂದ ಅಸ್ವಸ್ಥರಾಗಿರುವ ಸೋ. ಕಮಲೇಶ್‌ರವರನ್ನು ನೋಡಲು ಹೋಗಬೇಕೆಂದು ಗುರುಗಳು ನಿಶ್ಚಯಿಸಿದರು. ಅವರು ಗಾಲ್ಫ್ ಗಾಡಿಯಲ್ಲಿ ಆಶ್ರಮದ ಹಿಂದೆಯೇ ಇರುವ ವಸತಿ ಸಮುಚ್ಚಯಕ್ಕೆ ತೆರಳಿದರು. ದಾರಿಯಲ್ಲಿ ಅಭ್ಯಾಸಿಗಳ ಅಭಿವಂದನೆಗಳು, ಪ್ರಶ್ನೆಗಳು, ಸಮಸ್ಯೆಗಳು ಮೊದಲಾದವುಗಳಿಗೆ ಪ್ರತಿಸ್ಪಂದಿಸಲು ಅವರು ಅನೇಕ ಬಾರಿ ಗಾಡಿಯನ್ನು ನಿಧಾನಿಸಿದರು.

ಗುರುಗಳು ಲಿಫ್ಟ್‌ನಿಂದ ಹೊರಬರುತ್ತಿದ್ದಂತೆ ಅವರನ್ನು ಸೋ. ಕಮಲೇಶ್‌ರವರು ಅಭಿವಂದಿಸಿದರು. ಕಮಲೇಶ್‌ರವರ ಮನೆಯಲ್ಲಿರುವ ಛಾಯಾಚಿತ್ರಗಳನ್ನು, ಅದರಲ್ಲೂ ವಿಶೇಷವಾಗಿ ಬಾಬೂಜಿಯವರ ಛಾಯಾಚಿತ್ರಗಳನ್ನು ನೋಡುತ್ತ ಗುರುಗಳು ಆನಂದಿಸಿದರು. ಅಲ್ಲಿ ಸ್ವಲ್ಪ ಕೃಷ್ಣನನ್ನೇ ಹೋಲುವ ಬುದ್ಧನ ಒಂದು ವಿಗ್ರಹವಿತ್ತು. ಅದು 'ಬುದ್ಧ ಕೃಷ್ಣ' ಎಂದು ಗುರುಗಳಿಗೆ ಹೇಳಿದರು. ತುಸುಹೊತ್ತು ಗುರುಗಳು ದಿವಾನಖಾನೆಯಲ್ಲಿ ಕೆಲ ಅಭ್ಯಾಸಿಗಳಿಂದ ಸುತ್ತುವರಿದು ಕುಳಿತಿದ್ದರು, ಮತ್ತು "ಒಂದು ಹೂವಿನ ಸುತ್ತ ದುಂಬಿಗಳಿರುವಂತೆ ನನ್ನ ಸುತ್ತ ಯಾವಾಗಲೂ ಅಭ್ಯಾಸಿಗಳಿರುತ್ತಾರೆ" ಎಂದರು. ತದನಂತರದ ಅನೌಪಚಾರಿಕ ಚರ್ಚೆಯಲ್ಲಿ ಅವರು, ತನ್ನ ಯುರೋಪಿನ ಪ್ರವಾಸಗಳಲ್ಲಿ ನಡೆದ ಸಂಗತಿಗಳ ಕಥೆ ಹೇಳಿದರು. ಒಂದು ಸಂದರ್ಭದಲ್ಲಿ ಅವರು ಎಲ್ಲಿಗೋ ಹೋಗಲೆಂದು ಕಾರಿನಲ್ಲಿ ಹೊರಟಿದ್ದರು. ಅಭ್ಯಾಸಿಗಳಲ್ಲೊಬ್ಬರು ತನ್ನ ಬ್ಯಾಗನ್ನು ಮರೆತಿದ್ದರು, ಮತ್ತೆ ಆ ಹೊರಡುವಿಕೆಯನ್ನು ತಡೆಯಲು ಎರಡು ಮೂರು ಸಂಗತಿಗಳು ಘಟಿಸಿದವು. ಆಗ ಅವರು ಅಲ್ಲೇ ಆ ಪ್ರವಾಸವನ್ನು ರದ್ದುಗೊಳಿಸಲು ನಿಶ್ಚಯಿಸಿದರು. ಆನಂತರ ಪರಿಣಾಮವಾಗಿ ಅನೇಕ ಧನಾತ್ಮಕ ಸಂಗತಿಗಳು ಘಟಿಸಿದವು. ಇವು ಅವರ ಜೀವನದಿಂದ ನಾವು ಕಲಿಯುವ ನಿದರ್ಶನಗಳಾಗಿವೆ.

ಸೋ. ಕಮಲೇಶ್‌ರವರ ಮನೆಯಿಂದ ಗುರುಗಳು ಆ ವಸತಿ ಸಮುಚ್ಚಯದಲ್ಲಿ ಅಭ್ಯಾಸಿಗಳ ವಾಸ್ತವ್ಯವಿರುವ ಪ್ರತಿಯೊಂದು ಮನೆಗೂ ಭೇಟಿ ನೀಡಹೊರಟರು.





ಪ್ರತಿಯೊಂದರಲ್ಲೂ ಅವರು ತುಸುಹೊತ್ತು ತಂಗಿ ಮುಂದಿನದಕ್ಕೆ ಮುಂದುವರಿದರು. ಪ್ರತಿಯೊಂದು ಬಾರಿಯೂ ಅವರನ್ನು ಆತ್ಮೀಯವಾಗಿ ಸ್ವಾಗತಿಸಲಾಯಿತು. ಇತ್ತೀಚೆಗೆ ಗುರುಗಳು ಸ್ವಲ್ಪ ಚಡಪಡಿಕೆಯಿಂದಲೇ, "ನಾನು ನನ್ನ ಜಾಗಕ್ಕೆ ದೀರ್ಘಕಾಲ ಕಟ್ಟಿಹಾಕಲ್ಪಟ್ಟಿದ್ದೇನೆ" ಎನ್ನುತ್ತಿದ್ದಾರೆ. ಆ ಕಾರಣ ಕುಟೀರಕ್ಕೆ ಮರಳಿ ಬಂದಾಗ ಅವರಿಗೆ ಸಾಕಷ್ಟು ದಣಿವಾಗಿ ವಿಶ್ರಾಂತಿಯ ಅಗತ್ಯ ಬಿದ್ದರೂ ಈ ಸಂಚಾರವು ಅವರಿಗೊಂದು ಸ್ವಾಗತಾರ್ಹ ಬದಲಾವಣೆಯಾಗಿತ್ತು. ಗುರುಗಳ ಪ್ರವಾಸದ ಹೊರಹೋಗುವ ಕಟ್ಟಾಸೆಯ ಕುರಿತಾಗಿ ಗುರುಕುಟೀರದಲ್ಲಿ, 'ಮನದಲ್ಲಿ ಇಚ್ಛೆಯಿದ್ದರೂ ಶರೀರವು ದುರ್ಬಲವಾಗಿದೆ' ಎಂಬ ಮಾತು ಕೇಳಿಬರುತ್ತಿದೆ.

**ಜುಲೈ 6, ರವಿವಾರ: ಪಿಯಾನೊ:** ಬೆಳಗಿನ ಉಪಾಹಾರ ಮತ್ತು ವೃತ್ತಪತ್ರಿಕೆಯ ಪಠನಾನಂತರ ಗುರುಗಳು ಕುಟೀರದ ಹೊರಗೆ ಬಂದು ಸೂರ್ಯನ ಬಿಸಿಲಿಗೊಡ್ಡಿ ಸ್ವಲ್ಪಹೊತ್ತು ಕುಳಿತರು. ಆಗ ಅವರು ಸೋದರರೊಬ್ಬರ ಪಿಯಾನೊ ವಾದನವನ್ನು ಕೇಳುವ ಇಚ್ಛೆ ವ್ಯಕ್ತಪಡಿಸಿದರು. ಅವರು ಹಾಲ್‌ನಲ್ಲಿ ಕುಳಿತು ಈ ಸೋದರ ಕೆಲವು ಕೃತಿಗಳನ್ನು ನುಡಿಸಿದಾಗ ಅವನ್ನು ಅತ್ಯಾಸಕ್ತಿಯಿಂದ ಕೇಳುತ್ತ ಆಸ್ವಾದಿಸುತ್ತಿದ್ದರು. ಇದರ ನಂತರ, ಒಮೇಗಾ ವಿದ್ಯಾಲಯದಲ್ಲಿ ಕಲಿಯುತ್ತಿರುವ ಹುಡುಗಿಯೊಬ್ಬಳೂ ಪಿಯಾನೊ ನುಡಿಸಿದಳು. ನಮ್ಮ ಅಭ್ಯಾಸಿ ಅಷ್ಟು ಚೆನ್ನಾಗಿ ನುಡಿಸಬಲ್ಲರು ಎಂಬುದರಿಂದಾಗಿ ಗುರುಗಳು ಆನಂದತುಂದಿಲರಾಗಿದ್ದರು. ಅವರು, "ನಾನು ಯಾವಾಗಲೂ ಒಂದು ಪಿಯಾನೊ



ಕೊಳ್ಳಬೇಕೆಂದು ಆಶಿಸುತ್ತಿದ್ದೆ ಆದರೆ ಅದು ಆಗಲೇ ಇಲ್ಲ. ಇಲ್ಲಿ ಒಂದು ಇದ್ದರೆ ತುಂಬ ಚೆನ್ನಾಗಿರುತ್ತದೆ'' ಎಂದರು. ಅನೇಕ ಅಭ್ಯಾಸಿಗಳು ಆತುರದಿಂದ ಮುಂದೆ ಬಂದು ಸಲಹೆಗಳನ್ನು ಕೊಟ್ಟರು, ಮತ್ತು ಕೆಲವೇ ದಿನಗಳಲ್ಲಿ, ಒಂದು ಪಿಯಾನೊವನ್ನು ಕೊಂಡು ಕುಟೀರದಲ್ಲಿ ಅಳವಡಿಸಲಾಯಿತು. ಗುರುಗಳ ಆ ಉಪಕರಣವನ್ನು ನೋಡಿದಾಗ ಅವರ ಮುಖದಲ್ಲಿ ಸಂತೋಷವು ಕಂಡುಬಂದಿತು. ಒಬ್ಬ ಅಭ್ಯಾಸಿ ಕೆಲ ಕೃತಿಗಳನ್ನು ನುಡಿಸಿದರು, ನಂತರ ಗುರುಗಳೂ ಕೆಲವು ಸ್ವರಗಳನ್ನು ನುಡಿಸಿದರು. ಅದನ್ನು ಎಲ್ಲಿ ಇಡಬೇಕೆಂದು ಅವರು ವಿವರಿಸಿದರು ಮತ್ತು ಅದನ್ನು ಸರಿಯಾಗಿ ಹೊದಿಸಿ ಸುರಕ್ಷಿತವಾಗಿಡಬೇಕೆಂದು ಸೂಚಿಸಿದರು. ಅಭ್ಯಾಸಿಗಳು ಇಚ್ಛಿಸಿದಲ್ಲಿ ಯಾವುದೇ ಸಮಯದಲ್ಲಿ ಬಂದು ಅದನ್ನು ನುಡಿಸಬಹುದೆಂದು ಗುರುಗಳು ಹೇಳಿದರು. ಮುಂದಿನ ಕೆಲದಿನಗಳಲ್ಲಿ ಅನೇಕ ಅಭ್ಯಾಸಿಗಳು ಬಂದು ಅದನ್ನು ನುಡಿಸಿದಾಗ ಗುರುಗಳು ಕೇಳಿ ಆನಂದಿಸಿದರು.

**ಜುಲೈ 12, ರವಿವಾರ: ಗುರು ಪೂರ್ಣಿಮೆ:** ಪ್ರಸಾದವನ್ನರ್ಪಿಸಿದ ಬಳಿಕ ಗುರುಗಳು ತನ್ನನ್ನು ಕಾಣಲು ಕಾಯುತ್ತಿರುವ ಬೃಹತ್ ಸಂಖ್ಯೆಯಲ್ಲಿದ್ದ ಅಭ್ಯಾಸಿಗಳನ್ನು ಭೇಟಿಯಾಗಲು ಗುರುಗಳು ಸಿದ್ಧರಾದರು. ಅಭ್ಯಾಸಿಗಳು ಆರಂಭದಲ್ಲಿ ಕ್ರಮಬದ್ಧವಾಗಿ ಬಂದರು. ಗುರುಗಳು ಅವರೆಲ್ಲರನ್ನೂ ಒಬ್ಬರ ನಂತರ ಒಬ್ಬರಂತೆ ಆಶೀರ್ವದಿಸಿದರು. ಹೇಗೋ, ಅನೇಕ ಸಲ ಪ್ರಕಟಿಸಿದರೂ ಅಭ್ಯಾಸಿಗಳು ಗುರುಗಳ ಪಾದಸ್ಪರ್ಶ ಮಾಡುತ್ತಲೇ ಇದ್ದರು. ಗುರುಗಳಿಗೆ ಬಳಲಿಕೆಯುಂಟಾಗಿ, ಅವರಿಗೆ ತಾನು ಸತ್ಸಂಗ ನಡೆಸಿಕೊಡಬೇಕಿದ್ದರೆ ಬರುವುದನ್ನು ನಿಲ್ಲಿಸಬೇಕೆಂದು ಹೇಳಿದರು. ಆದರೆ ಜನರು ಮುನ್ನುಗ್ಗುವುದನ್ನು ಮುಂದುವರಿಸಿಯೇ ಇದ್ದರು. ಇದು ಮುಗಿದಾಗ ಗುರುಗಳು 500ಕ್ಕಿಂತಲೂ ಹೆಚ್ಚು ಮಂದಿಯನ್ನು ಭೇಟಿಯಾಗಿದ್ದರು. ಆನಂತರ ಅವರು ಧ್ಯಾನಮಂದಿರಕ್ಕೆ ಹೋಗಿ ಸುಮಾರು 50 ನಿಮಿಷಗಳ ಕಾಲ ಸತ್ಸಂಗವನ್ನು ನಡೆಸಿಕೊಟ್ಟರು. ಗುರುಗಳು ಮರಳಿ ಕುಟೀರಕ್ಕೆ ಸಾಗಿದಾಗ ಧ್ಯಾನಮಂದಿರದಲ್ಲಿ ಭಜನೆಗಳು ಮುಂದುವರಿದಿದ್ದವು.

**ಜುಲೈ 16, ಬುಧವಾರ: ಗುರುಗಳ ಅಸ್ವಾಸ್ಥ್ಯ:** ವಾರದ ಆರಂಭದಿಂದಲೇ ಗುರುಗಳು ಅಸ್ವಸ್ಥರಾಗಿದ್ದರು. ಅವರಿಗೆ ಎಡೆಬಿಡದ ಕೆಮ್ಮು ಇದ್ದು ಸೋಂಕು ತಗುಲಿದಂತಿದ್ದುದರಿಂದ ಕುಟೀರದೊಳಗೆ ಬರುವವರ ಮೇಲೆ ನಿಯಂತ್ರಣವಿತ್ತು. ಒಂದೆರಡು ದಿನಗಳಲ್ಲಿ ಗುರುಗಳ ಸ್ವಾಸ್ಥ್ಯದಲ್ಲಿ ಸ್ವಲ್ಪ ಸುಧಾರಣೆ ಕಂಡುಬಂದಿದ್ದು ಅವರು ಮತ್ತೆ ಜನರೊಂದಿಗೆ ಮಾತನಾಡತೊಡಲಾರಂಭಿಸಿದರು.

**ಜುಲೈ 20, ರವಿವಾರ:** ಸೋ. ಕಮಲೇಶ್‌ರವರು ಸತ್ಸಂಗವನ್ನು ನಡೆಸಿಕೊಟ್ಟರು ಮತ್ತು ಗುರುಗಳ ಸ್ವಾಸ್ಥ್ಯದ ಬಗ್ಗೆ ಪ್ರಕಟಣೆಯನ್ನು ನೀಡಿದರು. ಸಹಜಸಂದೇಶದಲ್ಲಿ, ಅಭ್ಯಾಸಿಗಳನ್ನು ಚೆನ್ನೈಯಲ್ಲಿನ ಬಾಬೂಜಿ ಸ್ಮಾರಕ ಆಶ್ರಮಕ್ಕೆ ಬರುವ ಬದಲಾಗಿ ತಿರುಪ್ಪೂರ ಭಂಡಾರಕ್ಕೆ ಹೋಗುವಂತೆ ಪ್ರೋತ್ಸಾಹಿಸುತ್ತ ಒಂದು ಸಂದೇಶವು ಪ್ರಕಟವಾಗಿ ಹೊರ ಬಂತು.

**ಜುಲೈ 22, ಮಂಗಳವಾರ: ಜ್ಯೋತಿಶ್ಯಾಸ್ತ್ರ ರೀತ್ಯಾ ಗುರುಗಳ ಜನ್ಮದಿನ:** ಹಿಂದೂ ಪಂಚಾಂಗದ ಪ್ರಕಾರ ಇದು ಗುರುಗಳ ಜನ್ಮದಿನವಾಗಿತ್ತು, ಆದರೆ ಅವರಿಗೆ ಮತ್ತೆ ಜ್ವರವೇರಿದ ಕಾರಣ ಅವರು ಅಭ್ಯಾಸಿಗಳನ್ನು ಭೇಟಿಯಾಗುವುದಿರಲಿ, ಹಾಸಿಗೆಯಿಂದ ಮೇಲೇಳುವ ಸ್ಥಿತಿಯಲ್ಲೂ ಇರಲಿಲ್ಲ. ಸೋ. ಕಮಲೇಶ್ ರವರು ಪೂರ್ವಾಹ್ನ 9 ಗಂಟೆಯ ಸತ್ಸಂಗವನ್ನು ನಡೆಸಿಕೊಟ್ಟರು. ಆಮೇಲೆ ಸೋ. ಎ.ಪಿ. ದುರೈಯವರು ಬರೆದ *Letters to my Christian Family* [ನನ್ನ ಕ್ರೈಸ್ತ ಕುಟುಂಬಕ್ಕೆ ಪತ್ರಗಳು] ಎಂಬ ಪುಸ್ತಕ ಬಿಡುಗಡೆಯಾಯಿತು.





# ಭಾರತದಲ್ಲಿನ ವಿವಿಧ ಕೇಂದ್ರಗಳಲ್ಲಿ ಪ್ರಿಯ ಗುರುದೇವರ ಜನ್ಮದಿನೋತ್ಸವ

ನಮ್ಮ ಪ್ರಿಯ ಗುರುದೇವರ 88ನೇ ಜನ್ಮದಿನೋತ್ಸವವನ್ನು ತಿರುಪುರದಲ್ಲಿನ ಭಂಡಾರಕ್ಕೆ ಹೋಗಲಸಾಧ್ಯವಾದವರಿಗಾಗಿ ಭಾರತಾದ್ಯಂತ ಕೇಂದ್ರಗಳಲ್ಲಿ ಆಚರಿಸಲಾಯಿತು. ಎಲ್ಲ ಕಡೆಯ ಕಾರ್ಯಕ್ರಮಗಳಲ್ಲಿ, ಸತ್ಸಂಗಗಳು, ಭಜನೆಗಳು, ಮಕ್ಕಳ ಕಿರುನಾಟಕಗಳು, ಅಭಿನಯಗಳು, ಅಭ್ಯಾಸಿಗಳ ಭಾಷಣಗಳು ಒಳಗೊಂಡಿದ್ದವು.

ವಡೋದರ, ಭಿಲ್ವಾರ, ಕೋಲ್ಕತ, ಖರಗಪುರ, ಜೋಧಪುರ, ಶ್ರೀ ಗಂಗಾನಗರ, ನವಸಾರಿ, ವಲ್ಸಾದ್, ಗುಲ್ಬರ್ಗ, ಆನಂದ್ ಇತ್ಯಾದಿ ಕೇಂದ್ರಗಳಿಂದ ಬಂದ ವರದಿಗಳು ಈ ಸಮಾವೇಶಗಳಲ್ಲಿ ಅನುಭವಕ್ಕೆ ಬಂದ ಕೃಪೆ ಮತ್ತು ದಿವ್ಯಾನುಗ್ರಹಗಳನ್ನು ವರ್ಣಿಸುತ್ತವೆ.


ಭಿಲ್ವಾರ


ವಲ್ಸಾಡ್



ಅಲಹಾಬಾದ್


ಸಹರಾನ್‌ಪುರ್



ಘಾತಮ್‌ಪುರ್


ಗುಲ್ಬರ್ಗ


ಲಖನೌ


ಖರಗ್‌ಪುರ

# ಭಾರತದಲ್ಲಿನ ವಿವಿಧ ಕೇಂದ್ರಗಳಲ್ಲಿ ಪ್ರಿಯ ಗುರುದೇವರ ಜನ್ಮದಿನೋತ್ಸವ


ಜೋಧ್‌ಪುರ


ಶ್ರೀಗಂಗಾನಗರ್


ಶ್ರೀನಗರ

## ಮಕ್ಕಳ ಭಾಗವಹಿಸುವಿಕೆ

ಮಕ್ಕಳು ನಮ್ಮ ಕುಟುಂಬಗಳ ಒಂದು ಭಾಗ ಮತ್ತು ಸಹಜಮಾರ್ಗದ ಕುಟುಂಬಗಳಲ್ಲಿ ಬೆಳೆಯುತ್ತಿದ್ದಂತೆ ಅವರು ಆಶ್ರಮದ ಚಟುವಟಿಕೆಗಳಲ್ಲಿ ಭಾಗವಹಿಸಲು ಕಲಿಯುತ್ತಾರೆ ಮತ್ತು ಗುರುಗಳ ಬೋಧನೆಯ ಮೌಲ್ಯ ಮತ್ತು ಗುಣಗಳನ್ನು ಸೂಕ್ಷ್ಮವಾಗಿ ಹೀರಿಕೊಳ್ಳುತ್ತಾರೆ. ಹಾಡು ಮತ್ತು ನೃತ್ಯಗಳ ಪ್ರದರ್ಶನದ ಮೂಲಕ ಅನುಭವಿಸುವ ಪ್ರೀತಿಯನ್ನು ವ್ಯಕ್ತಪಡಿಸಲು ಅವರು ಕಲಿಯುತ್ತಾರೆ. ಇಂತಹ ಸಭೆಗಳಲ್ಲಿನ ವಾತಾವರಣವನ್ನು ಅವರು ಜೀವಂತಗೊಳಿಸುತ್ತಾರೆ ಮತ್ತು ನಮ್ಮೆಲ್ಲರೊಳಗಿನ ಸಂತೋಷ ಮತ್ತು ಪ್ರೀತಿಯನ್ನು ಹೊರತರುತ್ತಾರೆ.


ಕೊಲ್ಕಾತಾ


ವಲ್ಸಾಡ್




ವಡೋದರ


ಗುಲ್ಬರ್ಗ


ಲಖನೌ

"ಯಾರು ತನ್ನನ್ನು ತಾನು ತಯಾರು ಮಾಡಿಕೊಂಡಿರುವನೋ ಆತನಿಗೆ ಯಥೇಚ್ಛವಾಗಿ ದಯಪಾಲಿಸಲು ನಾನು ಸದಾ ಸಿದ್ಧ. ಆದರೆ ಇಲ್ಲಿಯವರೆಗೆ ಯಾರೊಬ್ಬರೂ ತಮ್ಮ ಬಟ್ಟಲನ್ನು ಪೂರ್ತಿಯಾಗಿ ತುಂಬಿಕೊಳ್ಳಲು ಬಂದಂತೆ ತೋರುವುದಿಲ್ಲ. ನನ್ನಲ್ಲಿ ಇರುವುದೆಲ್ಲವನ್ನು ದೋಚಿ ಅವರಲ್ಲಿರುವುದನ್ನು ನನಗೆ ಹಿಂದಿರುಗಿಸಿರೆಂದು ಅಭ್ಯಾಸಿಗಳಿಗೆ ನಾನು ಆಗಾಗ್ಗೆ ಹೇಳುತ್ತಿರುತ್ತೇನೆ. ನ್ಯಾಯೋಚಿತ ವಿನಿಮಯ ದರೋಡೆ ಎನಿಸಿಕೊಳ್ಳುವುದಿಲ್ಲ."

– ಬಾಬೂಜಿ ಮಹಾರಾಜ್






## ಜಂಟಿ ಕಾರ್ಯದರ್ಶಿಗಳ ಹುಬ್ಬಳ್ಳಿ ಭೇಟಿ, ಕರ್ನಾಟಕ

ಮಿಷನ್ನಿನ ಜಂಟಿ ಕಾರ್ಯದರ್ಶಿಗಳಾದ ಎ.ಪಿ. ದೊರೈ ಅವರು ಆಗಸ್ಟ್ ಎಂಟರಿಂದ ಹತ್ತರವರೆಗೆ ಹುಬ್ಬಳ್ಳಿಗೆ ಭೇಟಿಯಿತ್ತರು.

8ನೇ ತಾರೀಖಿನಂದು ಬೆಳಿಗ್ಗೆ, ನಗರದಿಂದ ಹನ್ನೆರಡು ಕಿ.ಮೀ ದೂರದಲ್ಲಿರುವ ಆಶ್ರಮದ ಹೊಸ ಜಮೀನಿಗೆ ಭೇಟಿಕೊಟ್ಟರು. ಮಧ್ಯಾಹ್ನ, ಯೋಜನೆಯನ್ನು ನಿರ್ವಹಿಸುತ್ತಿರುವ ಅಭ್ಯಾಸಿಗಳೊಂದಿಗೆ ಚರ್ಚೆ ನಡೆಸಿದರು ಮತ್ತು ಜಮೀನನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಮಾರ್ಗದರ್ಶನವಿತ್ತರು. ಖರೀದಿಸಿರುವ ಜಾಗದಲ್ಲಿ ಅಭ್ಯಾಸಿಗಳು ಆದಷ್ಟು ಬೇಗ ಮನೆಗಳನ್ನು ಕಟ್ಟಿಕೊಳ್ಳಬೇಕು, ಏಕೆಂದರೆ ಕಾಲೋನಿ ಇಲ್ಲದಿದ್ದರೆ ಅಷ್ಟು ದೂರದಲ್ಲಿ ಆಶ್ರಮವನ್ನು ಹೊಂದುವ ಸಂಪೂರ್ಣ ಪರಿಕಲ್ಪನೆ ನಿರರ್ಥಕವಾಗಿಬಿಡುತ್ತದೆ ಎಂದು ಹೇಳಿದರು. ಆಶ್ರಮಕ್ಕೆ ಭೇಟಿಕೊಡುವ ಅಭ್ಯಾಸಿಗಳ ಅನುಕೂಲಕ್ಕಾಗಿ ತಾತ್ಕಾಲಿಕ ಧ್ಯಾನಮಂದಿರವನ್ನು ನಿರ್ಮಿಸುವ ವಿಷಯವನ್ನು ಪ್ರಸ್ತಾಪಿಸಲಾಯಿತು.

ಸಾಯಂಕಾಲ, ಗೀತಾ ರೇಶ್ಮಿಯವರ ಮನೆಯಲ್ಲಿ ನಡೆದ ಸಭೆಯಲ್ಲಿ ಅವರು ಭಾಗವಹಿಸಿದರು ಮತ್ತು ಸಹಜಮಾರ್ಗ ಪದ್ಧತಿಯ ಮೂಲ ತತ್ವಗಳನ್ನು ಆಧ್ಯಾತ್ಮದ ಆಕಾಂಕ್ಷಿಗಳ ಒಂದು ಗುಂಪಿಗೆ ವಿವರಿಸಿ ಹೇಳಿದರು.

9ನೇ ತಾರೀಖಿನಂದು ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ನಡೆದ ವಿಚಾರ ಗೋಷ್ಠಿಯಲ್ಲಿ ವಿವಿಧ ವಿಭಾಗಗಳ ಪದವೀಧರರನ್ನು ಉದ್ದೇಶಿಸಿ ಭಾಷಣ ಮಾಡಿದರು. ಸಹಜಮಾರ್ಗದ ತತ್ವಗಳನ್ನು ಪದವೀಧರರಿಗೆ ವಿವರಿಸಿದ ಅವರು ಸರಳತೆಯ ಅಗತ್ಯತೆಯನ್ನು ಒತ್ತಿ ಹೇಳಿದರು ಮತ್ತು ಜೀವನದಲ್ಲಿನ ಪ್ರಲೋಭನೆಗಳಿಂದ ದಾರಿತಪ್ಪದೆ ಹೊರಬರುವುದನ್ನು ತಮ್ಮ ನಿಜ ಜೀವನದ ಅನುಭವಗಳನ್ನು ಉದಾಹರಿಸಿ ಹೇಳಿದರು. ಆಧ್ಯಾತ್ಮಿಕ ಅಭ್ಯಾಸದಿಂದ ಪಡೆಯಬಹುದಾದ ಆತ್ಮ ಸ್ಥೈರ್ಯ ಮತ್ತು ಅದರಿಂದ ಉಂಟಾಗುವ ವ್ಯಕ್ತಿಯ ಆತ್ಮಗೌರವದ ವೃದ್ಧಿಯ ಬಗೆಗೆ ಒತ್ತಿ ಹೇಳಿದರು.

ಇದೇ ಸಮಯದಲ್ಲಿ, ಹುಬ್ಬಳ್ಳಿಯಿಂದ ನಲವತ್ತೆಂಟು ಕಿ.ಮೀ. ದೂರದಲ್ಲಿರುವ ಮುಂಡಗೋಡು ಪಟ್ಟಣದ ಸರ್ಕಾರಿ ಕಾಲೇಜಿನಲ್ಲಿ ಡಾ. ಗಜೇಂದ್ರ ಸಿಂಗ್ (ಉತ್ತರ ಕರ್ನಾಟಕ ವಲಯದ ಉಸ್ತುವಾರಿ) ಇವರ ನೇತೃತ್ವದಲ್ಲಿ 'ಮುಕ್ತ ಸಭೆ'ಯೊಂದನ್ನು ಆಯೋಜಿಸಲಾಗಿತ್ತು. ನೂರೈವತ್ತಕ್ಕೂ ಹೆಚ್ಚಿನ ಹಿರಿಯ ವಿದ್ಯಾರ್ಥಿಗಳು ಮತ್ತು ಕಾಲೇಜಿನ ಶಿಕ್ಷಕರುಗಳು ಈ ಮುಕ್ತ ಸಭೆಯಲ್ಲಿ ಭಾಗವಹಿಸಿದರು. ಅವರು ತಮ್ಮ ಭಾಷಣದಲ್ಲಿ ಧ್ಯಾನದ ಪಾತ್ರ, ನಿಜವಾದ ಪ್ರೀತಿ, ಸಂತೋಷ ಮತ್ತು ಅಂತರಂಗದ ಮಾರ್ಗದರ್ಶನ ಇವುಗಳ ಅವಶ್ಯಕತೆಯನ್ನು ಒತ್ತಿ ಹೇಳಿದರು.

ಸಾಯಂಕಾಲ, ಗೀತಾ ಕಾಮತ್‌ರವರ ಮನೆಯಲ್ಲಿ ನಡೆದ ಅನೌಪಚಾರಿಕ ಸಂವಾದದ ಸಮಯದಲ್ಲಿ, ಸೋ. ದೊರೈಯವರು ಮೂಲ ಸಾಧನೆಯ ಸರಿಯಾದ ಅಭ್ಯಾಸದ ಪ್ರಾಮುಖ್ಯತೆಯನ್ನು ಮತ್ತು ಅಭ್ಯಾಸಿಗಳ ನಡುವಿನ ಭ್ರಾತೃತ್ವದ ಭಾವನೆಯ ಅವಶ್ಯಕತೆಯನ್ನು ಒತ್ತಿ ಹೇಳಿದರು.

ಭಾನುವಾರದಂದು, ಸತ್ಸಂಗದ ನಂತರ ಸೋ. ದೊರೈಯವರಿಂದ ಆಯ್ಕೆ ಮಾಡಿಲಾಗಿದ್ದ ವಿಷಯಗಳ ಕುರಿತಾಗಿ ವಿಚಾರ ಗೋಷ್ಠಿಯೊಂದನ್ನು ಅಭ್ಯಾಸಿಗಳಿಗಾಗಿ ಆಯೋಜಿಸಲಾಗಿತ್ತು. ಅದರಲ್ಲಿನ ಕೆಲವು ವಿಷಯಗಳು ಈ ಕೆಳಕಂಡಂತಿದ್ದವು:

1. ನಮ್ಮ ವೃತ್ತಿಪರ ಮತ್ತು ವೈಯಕ್ತಿಕ ಜೀವನವು ಇತರರನ್ನು ಸಹಜಮಾರ್ಗಕ್ಕೆ ಸೆಳೆಯುವಂತಿರಬೇಕು.
2. ಹೊಸ ಆಶ್ರಮವನ್ನು ನಾವು ಬಳಸಿಕೊಳ್ಳುವ ಪರಿ ಹೇಗೆ.
3. ಆಧ್ಯಾತ್ಮಿಕ ಮತ್ತು ಭೌತಿಕ ಜೀವನಗಳ ನಡುವಿನ ವಿಭಜನೆಯು ಕೃತಕವಾದದ್ದು.

ಮಧ್ಯಾಹ್ನದ ಊಟದ ನಂತರ ಅಭ್ಯಾಸಿಗಳೊಂದಿಗಿನ ಪ್ರಶ್ನೋತ್ತರ ಕಾರ್ಯಕ್ರಮದ ಬಳಿಕ ಸಂಜೆ 4.30 ಕ್ಕೆ ಸತ್ಸಂಗದೊಂದಿಗೆ ಕಾರ್ಯಕ್ರಮ ಕೊನೆಗೊಂಡಿತು. ಸೋ. ದೊರೈಯವರು ಅದೇ ದಿನ ಸಂಜೆ ಬೆಂಗಳೂರಿಗೆ ಹೊರಟರು. ಎಲ್ಲ ಅಭ್ಯಾಸಿಗಳೂ ಕಾರ್ಯಕ್ರಮದ ಬಗೆಗೆ ಸಂತೋಷವನ್ನು ವ್ಯಕ್ತಪಡಿಸಿದರು ಮತ್ತು ಅವರ ಭೇಟಿಯಿಂದ ಹೆಚ್ಚಿನ ಲಾಭ ಪಡೆದುಕೊಂಡರು.

## ಭೋಪಾಲ್‌ನಲ್ಲಿ ಯು-ಕನೆಕ್ಟ್

ಯು-ಕನೆಕ್ಟ್ ಕಾಲೇಜು ವಿದ್ಯಾರ್ಥಿಗಳಿಗಾಗಿ ನಮ್ಮ ಮಿಷನ್ ಪ್ರಾರಂಭಿಸಿರುವ ಒಂದು ಚಟುವಟಿಕೆ. ಮಧ್ಯಪ್ರದೇಶ ವಲಯದ ಇಂದೋರ್ ಹಾಗೂ ಭೋಪಾಲ ಕೇಂದ್ರಗಳಲ್ಲಿ ಕಾರ್ಯವು ಆರಂಭವಾಗಿದ್ದು ನಿಧಾನವಾಗಿ ಇತರ ಕೇಂದ್ರಗಳಿಗೂ ಹರಡುತ್ತಿದೆ.

ಇಂದೋರ್ ಕೇಂದ್ರದಲ್ಲಿ ಎಂಟು ವಾರಗಳ ವರೆಗೆ ಈ ಪ್ರಯೋಗಾತ್ಮಕ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಒಂದು ಕಾಲೇಜಿನವರು ಸೆಪ್ಟೆಂಬರ್‌ನಿಂದ ಈ ಕಾರ್ಯಕ್ರಮವನ್ನು ಆರಂಭಿಸಲು ಅನುಮತಿ ನೀಡಿದ್ದಾರೆ.

ಇಂದೋರಿನ ಪರಿಣತ ಸ್ವಯಂ ಸೇವಕರ ತಂಡವೊಂದು ಭೋಪಾಲದ ಸ್ವಯಂ ಸೇವಕರಿಗಾಗಿ ಜುಲೈ 13ರಂದು ಕಾರ್ಯಕ್ರಮವೊಂದನ್ನು ನಡೆಸಿಕೊಟ್ಟಿತು. ಅವರು ತಮ್ಮ ಅನುಭವಗಳು ಮತ್ತು ಕಲಿಕೆಯನ್ನು ಇಲ್ಲಿನ ಸ್ವಯಂ ಸೇವಕರೊಂದಿಗೆ ಹಂಚಿಕೊಂಡರು.

ಭೋಪಾಲದ ಸ್ವಯಂ ಸೇವಕರ ತಂಡವಲ್ಲದೆ, ಸುತ್ತಲಿನ ಕೇಂದ್ರಗಳಾದ ವಿದಿಶ, ಮಂಡಿದೀಪ್, ರಾಯ್‌ಸೇನ್, ಸೆಹೋರ್ ಮತ್ತು ನರಸಿಂಗಗಢಗಳಿಗೆ ಸೇರಿದ ಅರವತ್ತಮೂರು ಅಭ್ಯಾಸಿಗಳು ಕೂಡ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ವಲಯದ ಸಂಯೋಜಕರಾದ ಯಾಮಿನಿ ಕರಮಾರ್‌ಕರ್ ತಮ್ಮ ತಂಡದ ಸದಸ್ಯರಾದ ರಾಜೇಶ್ ರವೇರ್‌ಕರ್, ನಿರ್ಮಲ್ ದಗ್ದಿ, ಇಂದೋರಿನ ರಮಾಕಾಂತ ಅಗರವಾಲ್ ಇವರುಗಳೊಂದಿಗೆ ಸೇರಿ ಭಾಗವಹಿಸಿದವರೊಂದಿಗೆ ಮಾತನಾಡಿ ಯು-ಕನೆಕ್ಟ್‌ನ ವಿವಿಧ ಅಂಶಗಳನ್ನು ವಿವರಿಸಿದರು.

ಕಾಲೇಜು ಹಾಗೂ ಸಂಸ್ಥೆಗಳಿಗೆ ಹೋಗುವ ಮುನ್ನ ತಮ್ಮ ತಮ್ಮ ಕೇಂದ್ರಗಳಲ್ಲಿ ಪ್ರಾಯೋಗಿಕ ಸಭೆಗಳನ್ನು ನಡೆಸುವಂತೆ ವಿವಿಧ ಕೇಂದ್ರಗಳನ್ನು ಈ ತಂಡದವರು ಪ್ರೇರೇಪಿಸಿದರು. ಕಾಲೇಜು, ವಿಶ್ವವಿದ್ಯಾಲಯ ಮತ್ತು ಇತರ ಸಂಸ್ಥೆಗಳಲ್ಲಿ ಪರಿಚಯಿಸಬೇಕಾಗಿರುವ ವಿದ್ಯಾರ್ಥಿಗಳ ಸ್ವಯಂ ಬೆಳವಣಿಗೆಯ ಪಠ್ಯಕ್ರಮವನ್ನು ಎರಡು ಸತತ ಅವಧಿಗಳಲ್ಲಿ ಚರ್ಚಿಸಲಾಯಿತು. ಕೇಂದ್ರದ ಉಸ್ತುವಾರಿ ಪಂಕಜ್ ಮಾಥುರ್‌ರವರು ತಮ್ಮ ತಂಡವು ಶೀಘ್ರದಲ್ಲೇ ಈ ಕಾರ್ಯವನ್ನು ಪ್ರಾರಂಭಿಸಲಿದೆ ಎನ್ನುವ ಭರವಸೆಯನ್ನೀಯುತ್ತಾ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಿದರು.

## ಯುವ ಕಾರ್ಯಕ್ರಮಗಳು



### ಯುವ ಜನರನ್ನು ಪ್ರೇರೇಪಿಸುವುದು, ಇಂದೋರ್

ಇಂದೋರ್ ಕೇಂದ್ರದಲ್ಲಿ ಯುವ ಜನರಿಗಾಗಿ 'ಹಾರ್ಟ್ ಸ್ಪೀಕ್ಸ್' ಎಂಬ ಕಾರ್ಯಕ್ರಮವೊಂದನ್ನು ಆಯೋಜಿಸಲಾಗಿತ್ತು. ವೃತ್ತಿಯಲ್ಲಿ ವೈದ್ಯರೂ ಹಾಗು ಹತ್ತಿರದ ದೇವಾಸ್ ಕೇಂದ್ರದ ಉಸ್ತುವಾರಿಯೂ ಆದ ಪ್ರಶಿಕ್ಷಕ ಸೋ. ವಿಕಾಸ ಶಿಯುರ್ಕರ್‌ರವರು ತಮ್ಮ ಜೀವನದ ಅನುಭವಗಳನ್ನು ಹಂಚಿಕೊಂಡರು.

ಕಾರ್ಯಕ್ರಮವನ್ನು ಚರ್ಚೆಯ ರೂಪದಲ್ಲಿ ಯೋಜಿಸಲಾಗಿದ್ದು ನಂತರದಲ್ಲಿ ಒಂದು ಪ್ರಶ್ನೋತ್ತರ ಅವಧಿಯಿದ್ದಿತು. ಸಂದರ್ಶನವನ್ನು ನಡೆಸಿಕೊಟ್ಟ ರಾಜೇಶ್ ರವೇರ್ಕರ್‌ರವರು ಸೋ. ವಿಕಾಸ್‌ರವರ ಜೀವನದ ವಿವಿಧ ಸಂದರ್ಭಗಳಿಗೆ ಸಂಬಂಧಿಸಿದಂತಹ – ಗುರುಗಳೊಂದಿಗಿನ ಅವರ ಅನುಭವಗಳು, ಭ್ರಷ್ಟಾಚಾರವೇ ಸಂಪ್ರದಾಯವಾಗಿರುವ ಈ ದಿನಗಳಲ್ಲಿ ಸರ್ಕಾರಿ ನೌಕರರಾಗಿ ಮತ್ತು ಯುವ ಅಭ್ಯಾಸಿಯಾಗಿ ಅವರು ಎದುರಿಸಿದ ಸಮಸ್ಯೆಗಳು ಇವುಗಳ ಕುರಿತಾಗಿ ಪ್ರಶ್ನೆಗಳನ್ನು ಕೇಳಿದರು. ಸೋ. ವಿಕಾಸ್‌ರವರು ತಮ್ಮ ಭಾವನೆಗಳನ್ನು, ಅನುಭವಗಳನ್ನು ಹಂಚಿಕೊಂಡರು ಹಾಗು ಅವರ ಜೀವನದಲ್ಲಿ ಸಹಜಮಾರ್ಗವು ಹೇಗೆ ಸಹಾಯ ಮಾಡುತ್ತಿದೆ ಎಂಬುದನ್ನು ತಿಳಿಸಿದರು. ನಮ್ಮಲ್ಲಿ ಪ್ರಗತಿಯಾದಂತೆ, ಗುರುಗಳ ಕೃಪೆಯಿಂದ ನಮ್ಮ ಸುತ್ತಮುತ್ತಲಿನವರಲ್ಲಿ ಹಾಗು ಇತರ ಎಲ್ಲ ವಿಷಯಗಳಲ್ಲಿ ನಮ್ಮ ಸಹನೆ ಹೆಚ್ಚುತ್ತಾ ಹೋಗುತ್ತದೆ ಎಂಬುದು ಅವರು ನೀಡಿದ ಅದ್ಭುತ ಸಂದೇಶಗಳಲ್ಲೊಂದು. ಅವರು ನಂಬಿಕೆ, ಗುರುಗಳಲ್ಲಿ ಪ್ರೇಮ ಮತ್ತು ಸೇವೆ ಸಲಿ ್ಲಸುವುದರ ಬಗೆಗೆ ಮಾತನಾಡಿದರು.

ತೊಂಬತ್ತು ನಿಮಿಷಗಳ ಈ ಸಂದರ್ಶನದ ನಂತರ ಯುವ ಅಭ್ಯಾಸಿಗಳು ಸಾಧನೆಗೆ ಸಂಬಂಧಿಸಿದಂತೆ ಅನೇಕ ಪ್ರಶ್ನೆಗಳನ್ನು ಕೇಳಿದರು.

ಆಧ್ಯಾತ್ಮಿಕತೆಯ ಹಿನ್ನೆಲೆಯಲ್ಲಿ, ಮಿಷನ್ನಿನ ಯುವ ಜನರು ತಮ್ಮ ಹಿರಿಯ ಸಹೋದರರ ಅನುಭವದಿಂದ ತಮ್ಮ ದೈನಂದಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸಹಾಯ ಮಾಡುವುದೇ ಈ ಕಾರ್ಯಕ್ರಮದ ಮುಖ್ಯಗುರಿ. ಅವರು ಕಲಿಯುವ ಹಾಗು ಕೆಲಸ ಮಾಡುವ ಸ್ಥಳಗಳಿಗೆ ಸಹಜಮಾರ್ಗವನ್ನು ಕೊಂಡೊಯ್ಯಲು ಕೂಡ ಇದು ಸಹಾಯಕಾರಿ.

ಯುವ ಅಭ್ಯಾಸಿಯಾದ ನಿಮೇಶ್ ಪಾರಿವಾಲ್‌ರವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು ಮತ್ತು ಅವಿನಾಶ್ ವಂದನಾರ್ಪಣೆ ಮಾಡಿದರು. ಕಾರ್ಯಕ್ರಮದಲ್ಲಿ ನಲವತ್ತಕ್ಕೂ ಹೆಚ್ಚು ಅಭ್ಯಾಸಿಗಳು ಪಾಲ್ಗೊಂಡಿದ್ದರು. ತಿಂಗಳಿಗೊಮ್ಮೆ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಆಯೋಜಿಸಲಾಗಿದೆ.

### ಮಣಪ್ಪಾಕ್ಕಂ, ತಮಿಳುನಾಡು

ಚೆನ್ನೈನ ಸುಮಾರು ಐವತ್ತು ಯುವ ಜನರು ಹಾಗು ಕೆಲವು ವಿದೇಶಿ ಅಭ್ಯಾಸಿಗಳಿಗಾಗಿ ಆಗಸ್ಟ್ 3 ರಂದು ಮಣಪ್ಪಾಕ್ಕಂನಲ್ಲಿ ಕಾರ್ಯಕ್ರಮವೊಂದನ್ನು ಆಯೋಜಿಸಲಾಗಿತ್ತು.

ಪ್ರತಿಯೊಬ್ಬ ಅಭ್ಯಾಸಿಗೆ ಒಂದು ಮೌಲ್ಯವನ್ನು (ಗುಣಗಳು) ಹೊಂದಿದ್ದ ಕಾರ್ಡ್‌ನ್ನು ನೀಡಲಾಗಿತ್ತು. ಸೆಪ್ಟೆಂಬರ್ 25, 2012 ರ ವಿಸ್ಪರ್ಸ್ ಸಂದೇಶದೊಂದಿಗೆ ಕಾರ್ಯಕ್ರಮದ ಆರಂಭವಾಯಿತು. ಅಭ್ಯಾಸಿಗಳು ಸಂಕೋಚ ಬಿಟ್ಟು ಹೊರಬರುವಂತೆ ಮಾಡಲು ಎಲ್ಲರಿಗೂ ತಮ್ಮ ಪರಿಚಯ ಹೇಳಿಕೊಂಡು ಅವರ ಕಾರ್ಡಿನಲ್ಲಿರುವ ಮೌಲ್ಯವನ್ನು ಗಟ್ಟಿಯಾಗಿ ಓದಲು ಹೇಳಲಾಯಿತು. ಇತರರು ಅದನ್ನು ಸ್ಮರಣಶಕ್ತಿಯ ಆಟಕ್ಕಾಗಿ ನೆನಪಿನಲ್ಲಿಟ್ಟುಕೊಳ್ಳಬೇಕಿತ್ತು. ಸಹಜಮಾರ್ಗವನ್ನು ಆರಂಭಿಸಿದ ನಂತರ ಅವರಿಗಾದ ವಿಶಿಷ್ಟ ಅನುಭವವನ್ನು ಅವರೆಲ್ಲಾ ಹಂಚಿಕೊಂಡರು. ಸಹಜಮಾರ್ಗದ ಹತ್ತು ನಿಯಮಗಳನ್ನು ನೆನಪಿಸಿಕೊಳ್ಳುವಂತೆ ಎಲ್ಲರಿಗೂ ತಿಳಿಸಲಾಯಿತು ಮತ್ತು ನಿಯಮಗಳನ್ನು ಆದಷ್ಟೂ ನಿಖರವಾಗಿ ಹೇಳುವಂತೆ ಕೇಳಲಾಯಿತು.

ಪ್ರತಿ ನಿಯಮಕ್ಕೆ ಸಂಬಂಧಿಸಿದ ಗುಣಗಳನ್ನು ಪತ್ತೆ ಹಚ್ಚುವುದು 'ಮ್ಯಾಕ್ಸಿಮ್ ಕುಟುಂಬವನ್ನು ಹುಡುಕಿ' ಕಾರ್ಯಕ್ರಮದ ಗುರಿಯಾಗಿತ್ತು. ಪ್ರತಿ ಅಭ್ಯಾಸಿಯೂ ತಮ್ಮ ಕಾರ್ಡ್‌ನಲ್ಲಿದ್ದ ಗುಣವು ಯಾವ ನಿಯಮಕ್ಕೆ ಸೇರಿದುದು ಎಂಬುದನ್ನು ಗುರುತಿಸ ಬೇಕಾಗಿತ್ತು ಮತ್ತು ಆ ನಿಯಮಕ್ಕೆ ಸೇರಿದ ಸಹ ಆಟಗಾರರನ್ನು ಕೂಡ ಗುರುತಿಸ ಬೇಕಾಗಿತ್ತು.

ಪ್ರತಿ ತಂಡದವರೂ 'ವ್ಯಕ್ತಪಡಿಸುವ ಬಗೆ' ಎಂಬ ವಿಷಯವನ್ನು ಚರ್ಚಿಸಿದರು. ಈ ಚಟುವಟಿಕೆಯಲ್ಲಿ, ಸಹಜಮಾರ್ಗಕ್ಕೆ ಹೊಸ ಸದಸ್ಯರನ್ನು ಪರಿಚಯಿಸುವಾಗ ನಾವು ತಿಳಿದುಕೊಂಡಿರಬೇಕಾದ ವಿಷಯಗಳಿಗೆ ಹೆಚ್ಚು ಒತ್ತು ಕೊಡಲಾಗಿತ್ತು. ತಮ್ಮನ್ನು ಅವಲೋಕಿಸಿಕೊಂಡು, ತಮ್ಮ ಆಲೋಚನೆಗಳನ್ನು ಹಂಚಿಕೊಳ್ಳಲು ಸಾಕಷ್ಟು ಸಮಯವನ್ನು ಭಾಗವಹಿಸಿದವರಿಗೆ ನೀಡಲಾಗಿತ್ತು.

'ಗುರಿ'ಯ ಮೇಲೆ ಕೇಂದ್ರಿತವಾಗುವುದರ ಅಗತ್ಯವನ್ನು 'ಡಾರ್ಟ್' ಆಟದ ಮೂಲಕ ತಿಳಿಸಿಕೊಡಲಾಯಿತು. ಇದು ಭಾಗವಹಿಸಿದವರಿಗೆ ಆನಂದ ತಂದಿತು. ಚಹಾ ಮತ್ತು ತಿಂಡಿಯ ನಂತರ ಎರಡು ವೀಡಿಯೋಗಳನ್ನು ಪ್ರದರ್ಶಿಸಲಾಯಿತು: 'ಉತ್ತಮ ಶಿಸ್ತನ್ನು ಬೆಳೆಸಿಕೊಳ್ಳಲು ಐದು ಸಲಹೆಗಳು' ಮತ್ತು ಹೋವರ್ಡ್ ಮಾರ್ಟಿನ್‌ರವರ ಭಾಷಣ 'ಎಂಗೇಜಿಂಗ್ ದ ಹಾರ್ಟ್ ಇಂಟೆಲಿಜೆನ್ಸ್' ಇವುಗಳನ್ನು ತೋರಿಸಲಾಯಿತು.

ಕಾರ್ಯಕ್ರಮ ಮುಕ್ತಾಯಗೊಳ್ಳುತ್ತಿದ್ದಂತೆ ಎಲ್ಲರೂ ತಮ್ಮ ಅಭಿಪ್ರಾಯಗಳನ್ನು ಮತ್ತು ಸಲಹೆಗಳನ್ನು ತಿಳಿಸಿದರು. ಅವರ ಪ್ರತಿಕ್ರಿಯೆಗಳನ್ನು ದಾಖಲಿಸಲಾಯಿತು.



# ಮೌಲ್ಯಗಳ ಶಿಕ್ಷಣ

ನಮ್ಮ ಮಿಷನ್ನಿನ ವಿವಿಧ ಕೇಂದ್ರಗಳಲ್ಲಿ ಇಸವಿ 2000 ರಿಂದ ಅಂದರೆ ಸುಮಾರು ಒಂದು ದಶಕಕ್ಕೂ ಮೊದಲಿಂದಲೇ ಜಾರಿಯಲ್ಲಿರುವ ಮೌಲ್ಯಾಧಾರಿತ ಆಧ್ಯಾತ್ಮಿಕ ಶಿಕ್ಷಣ ಯೋಜನೆ (ವಿಬಿಎಸ್ಇ) ಯ ಬಗ್ಗೆ ನಮಗೆಲ್ಲ ಪರಿಚಯವಿದೆ. ಈ ಕಾಲಾವಧಿಯಲ್ಲಿ 100 ಕ್ಕೂ ಹೆಚ್ಚು ಶಾಲೆಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿವೆ ಮತ್ತು 10000ಕ್ಕೂ ಹೆಚ್ಚು ಬೋಧಕರಿಗೆ ಮಿಷನ್ನಿನಿಂದ ತರಬೇತಿ ನೀಡಲಾಗಿದೆ. ಈ ಕಾರ್ಯಕ್ರಮವನ್ನು ವಿಮರ್ಶಿಸಿ ಮತ್ತಷ್ಟು ಸುಧಾರಣೆಗಳನ್ನು ತರಲು ಗುರುಗಳು ಇಚ್ಛೆಹೊಂದಿದ್ದರು.

ಅನುಭವಗಳನ್ನು ಆಧರಿಸಿ ಕಾರ್ಯಕ್ಷೇತ್ರಗಳಿಂದ ದೊರೆತ ಮರುಮಾಹಿತಿಗಳನ್ನು ತಂಡವು ಅಳವಡಿಸಿಕೊಂಡು ಕೆಲವು ಬದಲಾವಣೆಗಳನ್ನು ಜಾರಿಗೆ ತಂದಿದೆ. ಈ ಯೋಜನೆಯನ್ನು ಈಗ 'ಮೌಲ್ಯಗಳ ಶಿಕ್ಷಣ' ಎಂದು ಉಲ್ಲೇಖಿಸಲಾಗಿದೆ ಮತ್ತು ಇದನ್ನು 8 ರಿಂದ 12ನೇ ತರಗತಿಯ ಮಕ್ಕಳಿಗೆಂದು ಪ್ರಸ್ತಾಪ ಮಾಡಲಾಗಿದೆ. ಮೌಲ್ಯಗಳ ತಿರುಳೆನಿಸಿರುವ ಸಾಚಾತನ, ನಮ್ರತೆ, ಧೈರ್ಯ, ಜವಾಬ್ದಾರಿ, ಪ್ರೇಮ ಮತ್ತು ಸ್ವಾತಂತ್ರ್ಯಗಳನ್ನು ಒಳಗೊಂಡಂತೆ ಒಂದು ತರಗತಿಗೆ 20 ಸಮಾವೇಶಗಳಲ್ಲಿ (ಸೆಷನ್ಸ್) ಇದನ್ನು ನಡೆಸಿಕೊಡಲಾಗುವುದು. ಅಭ್ಯಾಸಿ ಸ್ವಯಂಸೇವಕರಿಂದ ನಡೆಸಲ್ಪಡುವ ಈ ಕಾರ್ಯಕ್ರಮವು (ಶಾಲೆಗಳ) ನಿಯತಕಾಲಿಕ ವೇಳಾಪಟ್ಟಿಯ ಭಾಗವಾಗಿರುತ್ತದೆ.

ವಿದ್ಯಾರ್ಥಿಗಳನ್ನು ಉತ್ತೇಜಿಸಲು ಹಾಗು ಅವರ ಅನುಭೂತಿಯ ಅವಶ್ಯಕತೆಯನ್ನು ಗಮನದಲ್ಲಿಟ್ಟು ವಿದ್ಯಾರ್ಥಿಗಳನ್ನು ತೊಡಗಿಸಿಕೊಂಡೇ ಇರುವಂತೆ ತರಗತಿಗಳನ್ನು ಹೆಚ್ಚು ಚಿತ್ತಾಕರ್ಷಕವನ್ನಾಗಿಸಿ, ಬೋಧನಾ ಕ್ರಮವನ್ನು ಪ್ರತಿಕ್ರಿಯಾತ್ಮಕ ರೀತಿಯಲ್ಲಿರುವಂತೆ ರೂಪಿಸಲಾಗಿದೆ. ಇದರಲ್ಲಿ ವೀಡಿಯೊ ಬಿತ್ತರಿಕೆ, ಕಥೆಗಳು ಮತ್ತು ಅಭ್ಯಾಸಪಾಠಗಳು ಹಾಗು ನಡು ನಡುವೆ ಚಿಂತನೆಗಳನ್ನು ಪ್ರಚೋದಿಸುವ ಪ್ರಯತ್ನಗಳೂ ಸೇರಿರುತ್ತವೆ.

2014ನೇ ಶೈಕ್ಷಣಿಕ ವರ್ಷದಲ್ಲಿ ಮೇ ಮಾಸದಲ್ಲಿ ಪ್ರಾರಂಭಗೊಂಡು, 9 ಕೇಂದ್ರಗಳ 15 ಶಾಲೆಗಳು ಈ ಹೊಸ ಮೌಲ್ಯಗಳ ಶಿಕ್ಷಣ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಮುಂದೆ ಬಂದಿವೆ. ಈ ಕೇಂದ್ರಗಳು ಯಾವುವೆಂದರೆ, ರೇವ (2 ಶಾಲೆಗಳು), ವಡೋದರ (3), ಹೈದರಾಬಾದ್ (2), ತಿರುಚ್ಚಿ (2), ಮುಂಬೈ (1) ಚೆನ್ನೈ (1), ದೆಹಲಿ (2) ಮತ್ತು ಸೂರತ್ (1).

ಮೌಲ್ಯಗಳ ಶಿಕ್ಷಣ ಕಾರ್ಯಕ್ರಮದ ತಂಡದಲ್ಲಿ, ವಸ್ತುವಿಷಯ ಮತ್ತು ತರಬೇತಿಗಾಗಿ ರಂಜನಿ ಬಾಲಾಜಿ, ಕೇಂದ್ರಗಳೊಡನೆ ಸಹಯೋಜನೆಗಾಗಿ ಕಾಂತಿ ಪಪ್ಪು ಮತ್ತು ತಂತ್ರಜ್ಞಾನ ಮತ್ತು ಆಡಳಿತಕ್ಕಾಗಿ ಜ್ಯೋತಿ ಚೆರೆಡ್ಡಿ ಸ್ಥಾನ ತುಂಬಿದ್ದಾರೆ. ಅಲ್ಲದೆ, ಕೇಂದ್ರಗಳಲ್ಲಿ ಅನೇಕ ಸಂಯೋಜಕರು ಹಾಗು ಸ್ವಯಂಸೇವಕರು ಸಹ ಇದ್ದಾರೆ. ಮುಂಬರುವ ಶೈಕ್ಷಣಿಕ ವರ್ಷದಲ್ಲಿ ಈ ಯೋಜನೆಯನ್ನು ಪ್ರಾರಂಭ ಮಾಡಲು ಕೆಲವು ಕೇಂದ್ರಗಳು ಮತ್ತು ಶಾಲೆಗಳನ್ನು ಮುಂದಾಗಿಯೇ ಆಯ್ಕೆಮಾಡಲಾಗಿದೆ. ಈ ಯೋಜನೆಯನ್ನು ಪ್ರಾರಂಭ ಮಾಡಲು ಆಸಕ್ತಿಯುಳ್ಳ ಕೇಂದ್ರಗಳು, ಕಾಂತಿ ಪಪ್ಪು ಅವರನ್ನು vbe@shpt.in ಮೂಲಕ ಸಂಪರ್ಕಿಸಬಹುದಾಗಿದೆ.

## ಕೇಂದ್ರಗಳಿಂದ ಅನುಭವಗಳು

**ವಡೋದರ:** ಮಾರ್ಗದರ್ಶಕ ಯೋಜನೆಯಗಿರುವುದರಿಂದ (ಪೈಲಟ್ ಪ್ರಾಜೆಕ್ಟ್) ಮೌಲ್ಯಗಳ ಶಿಕ್ಷಣ ತರಗತಿಗಳು ಬರೋಡದ ಒಎನ್‌ಜಿಸಿ ಪ್ರೌಢಶಾಲೆಯಲ್ಲಿನ 8ನೇ ತರಗತಿಯ 4 ವಿಭಾಗಗಳಲ್ಲಿ ಮತ್ತು ಅಲ್ಕಾಪುರಿಯ ಬರೋಡ ಪ್ರೌಢ ಶಾಲೆಯಲ್ಲಿನ 9ನೇ ತರಗತಿಯ 2 ವಿಭಾಗಗಳಲ್ಲಿ ಪ್ರಾರಂಭಗೊಂಡವು, 10 ಮಂದಿ ಸ್ವಯಂಸೇವಕರು ಮತ್ತು 5 ಬೆಂಬಲಿಗ ಸದಸ್ಯರೊಂದಿಗಿನ ತಂಡವೊಂದು ಬೋಧನಾ ಕ್ರಮದಲ್ಲಿ ತೊಡಗಿಸಿಕೊಂಡಿದೆ. ತರಗತಿಗಳಲ್ಲಿ ನಡೆಸಲಾಗುವ ಅನೇಕ ಕಾರ್ಯಕ್ರಮಗಳ ಬಗ್ಗೆ ಚರ್ಚೆ ಮಾಡಲು ಅವರು ಪ್ರತಿವಾರ ಭೇಟಿ ಮಾಡುತ್ತಾರೆ. ಗೋತ್ರಿಯಲ್ಲಿರುವ ತೇಜಸ್ ವಿದ್ಯಾಲಯವು ಪಠ್ಯಕ್ರಮವನ್ನು ಒಪ್ಪಿಕೊಂಡು ಶಾಲೆಯ ಬೋಧಕರು ಬೋಧನಾ ಕಾರ್ಯವನ್ನು ಕೈಗೊಂಡಿದ್ದಾರೆ. ಶಾಲೆಯ ಅಧಿಕಾರಿಗಳು ನೀಡಿದ ಬೆಂಬಲ ನಿಜಕ್ಕೂ ಶ್ಲಾಘನೀಯ. ವಿದ್ಯಾರ್ಥಿಗಳಿಂದ ದೊರೆತ ಪ್ರತಿಕ್ರಿಯೆ ಧನಾತ್ಮಕವಾಗಿದ್ದು ಅವರು ಈ ತರಗತಿಗಳಿಂದ ಸಂತಸಪಡುತ್ತಿದ್ದಾರೆ.


ಅಲಕಾಪುರಿ


ಬಿಎಚ್ಎಸ್,ಒಎನ್‌ಜಿಸಿ

**ಮುಂಬೈ:** ಮಹಾರಾಷ್ಟ್ರದಲ್ಲಿನ ಬಿಲ್ಲಬಾಂಗ್ ಅಂತರರಾಷ್ಟ್ರೀಯ ಪ್ರೌಢಶಾಲೆ ಮತ್ತು ನಾಗೋಥಾಣೆಯಲ್ಲಿನ ಜೆಎಚ್ ಅಂಬಾನಿ ಶಾಲೆಯಲ್ಲಿನ 8ನೇ ತರಗತಿಗಳಲ್ಲಿ ಸಮಾವೇಶಗಳನ್ನು ನಡೆಸಲಾಗುತ್ತಿದೆ. ಎರಡೂ ಶಾಲೆಗಳಲ್ಲಿ ಕಾರ್ಯಕ್ರಮವು ನಮ್ಮ ಸ್ವಯಂಸೇವಕರ ಸಹಕಾರ ಮತ್ತು ಬೆಂಬಲದಿಂದ ನಡೆಯುತ್ತಿವೆ. ಎರಡೂ ಶಾಲೆಗಳ ಬೋಧಕರು ಉತ್ತಮವಾಗಿ ಬೆಂಬಲಿಸಿ ಮಕ್ಕಳು ತರಗತಿಗಳಲ್ಲಿ ಸ್ವಯಂಸೇವಕರುಗಳೊಂದಿಗೆ ಮುಕ್ತ ಮನಸ್ಸಿನಿಂದ ಭಾಗವಹಿಸುತ್ತಿರುವದರ ಬಗ್ಗೆ ಸಹ ಶ್ಲಾಘಿಸಿದ್ದಾರೆ. ಮಕ್ಕಳು ಮುಕ್ತ ಮನಸ್ಸಿನಿಂದ ಹಾಗು ನಡೆಯುತ್ತಿರುವ ಕಾರ್ಯಕ್ರಮಗಳಲ್ಲಿ ಅವರು ತಮ್ಮನ್ನು ಪ್ರಸ್ತುತಪಡಿಸಿಕೊಳ್ಳುತ್ತಿರುವ ರೀತಿ ವಿಸ್ಮಯ ಉಂಟುಮಾಡಿದೆ. ಸಾಚಾತನವೆಂಬ ಮೊದಲನೇ ಮೌಲ್ಯವನ್ನು ಬಹಳ ಸುಲಭವಾಗಿ ಗ್ರಹಿಸಬಲ್ಲವರಾಗಿದ್ದರು. ಪ್ರತಿಯೊಂದು ತರಗತಿಗಳಲ್ಲಿ ತಾವು ಗಮನಿಸಿದ ವಿಷಯಗಳು, ಉಲ್ಲೇಖಗಳು, ತಮಗೆ ತೋಚಿದ ಯೋಚನೆ ಪರ್ಯಾಲೋಚನೆಗಳನ್ನು ಅವರು ಬರವಣಿಗೆಯ ರೂಪದಲ್ಲಿ ತೆರೆಸಿಡುವ ವಿಚಾರದಿಂದ ದಿನಚರಿ ಪುಸ್ತಕ ಬರೆಯುವುದನ್ನು ಪ್ರಾರಂಭಿಸಲಾಯಿತು. ತರಗತಿಗಳಲ್ಲಿ ಯಾವಾಗಲು ತಿಳಿಯಾದ ಹಾಗು ಹರ್ಷದಿಂದ ಕೂಡಿದ ವಾತಾವರಣ ಇದ್ದಿತು. ಈ ತಂಡವನ್ನು ಮರಾಠಿ ಮಾಧ್ಯಮದ ಜೆ. ಎಚ್. ಅಂಬಾನಿ ಶಾಲೆಯ ಮುಖ್ಯಸ್ಥರು ಮರಾಠಿಯಲ್ಲಿ ಅಥವಾ ಹಿಂದಿಯಲ್ಲಿ ಅವರ ಶಾಲೆಯಲ್ಲಿ ಮೌಲ್ಯ ಶಿಕ್ಷಣ ನೀಡುವಂತೆ ಆಹ್ವಾನಿಸಿದರು.


ಮುಂಬೈ


ನಾಗೋಥಾಣೆ

## ಮನ್ನವರಪ್ಪಡು, ನೆಲ್ಲೂರು (ಗ್ರಾಮಾಂತರ)



ನೆಲ್ಲೂರು ಕೇಂದ್ರದ ಅಭ್ಯಾಸಿಗಳು, ಮನ್ನವರಪ್ಪಡುವಿನ (ನೆಲ್ಲೂರು ಗ್ರಾಮಾಂತರ) ಬಳಿ 33 ಎಕರೆ ಭೂಮಿಯನ್ನು ಖರೀದಿಸಿದ್ದಾರೆ. ಇದರಲ್ಲಿ 5.85 ಎಕರೆ ಪ್ರದೇಶವನ್ನು ಧ್ಯಾನ ಮಂದಿರ ಮತ್ತು ಇತರೆ ಸೌಕರ್ಯಗಳಿಗಾಗಿ ಗೊತ್ತುಮಾಡಿದ್ದಾರೆ ಮತ್ತೆ ಉಳಿದ ಪ್ರದೇಶವನ್ನು 300 ನಿವೇಶನಗಳಾಗಿ ವಿಭಾಗಿಸಿದ್ದಾರೆ.

ಗುರುಗಳ ದಯಾಪೂರ್ಣ ಸಮ್ಮತಿ ಮತ್ತು ಆಶೀರ್ವಾದಗಳೊಂದಿಗೆ, ಮನ್ನವರಪ್ಪಡುವಿನ ಸುಲೋಚನ ಸದನದಲ್ಲಿ, ನೆಲ್ಲೂರು ಕೇಂದ್ರದ ಮುಖ್ಯ ವ್ಯವಸ್ಥಾಪಕಿ ಸೋ. ಉಮಾ ಗಂಗಾಧರ್‌ರವರು ಪಾಕಶಾಲೆಗೆ ಹೊಂದಿಕೊಂಡಂತೆ ಭೋಜನಗೃಹದ ನಿರ್ಮಾಣಕ್ಕೆ ಆಗಸ್ಟ್ 6 ರಂದು ಭೂಮಿಪೂಜೆ ನೆರವೇರಿಸಿದರು. ನಿರ್ಮಾಣದ ಅಂದಾಜು ವೆಚ್ಚ ರೂ. 20.00 ಲಕ್ಷಗಳು; ಮತ್ತೆ ರೂ.4.00 ಲಕ್ಷಗಳನ್ನು ಶೌಚಗೃಹ ವಿಭಾಗದ ನಿರ್ಮಾಣಕ್ಕಾಗಿ ನಿಗದಿ ಪಡಿಸಲಾಯಿತು.

ಕಾರ್ಯಕ್ರಮದ ಅನಂತರ ನಡೆದ ಸತ್ಸಂಗದಲ್ಲಿ, ನೆಲ್ಲೂರು ಮತ್ತು ಇತರೆ ಕೇಂದ್ರಗಳಿಂದ ಅಂದರೆ ಕಾವಲಿ, ಬುಚ್ಚಿರೆಡ್ಡಿಪಾಳ್ಯಮ್, ಸಿದ್ಧಿಪುರಂ, ಗೂಡೂರು, ವೆಂಕಟಗಿರಿ, ನಾಯ್ಡುಪೇಟ ಮತ್ತು ಪೊಡಲಕೂರ್‌ಗಳಿಂದ ಆಗಮಿಸಿದ್ದ ಸುಮಾರು 200 ಅಭ್ಯಾಸಿಗಳು ಭಾಗವಹಿಸಿದ್ದರು. ಈ ಶುಭ ಸಂದರ್ಭದಲ್ಲಿ, ಕೇಂದ್ರದ ಮುಖ್ಯ ವ್ಯವಸ್ಥಾಪಕರು, ಕಟ್ಟಡ ನಿರ್ಮಾಣದ ಕಾರ್ಯಕ್ಕೆ, ಅಬ್ಯಾಸಿಗಳು ಹೆಚ್ಚಿನ ರೀತಿಯಲ್ಲಿ ಸ್ವಯಂ ಸೇವೆ ಸಲ್ಲಿಸಲು ಮುಂದೆ ಬಂದು, ಯೋಜನೆಯು ಅತಿ ಶೀಘ್ರವಾಗಿ ಮುಗಿಯಲು ಸಹಕಾರ ನೀಡಬೇಕೆಂದು ಒತ್ತಾಯಪೂರ್ವಕವಾಗಿ ವಿನಂತಿಸಿದರು.

## ವಲಯ ಸಭೆ, ಹರಿಯಾಣ

ಸೋನ್‌ಪೇಟೆಯಲ್ಲಿ ಒಂದು ವಲಯ ಸಭೆಯು (ವಲಯ 21) ಆಗಸ್ಟ್ 17 ರಂದು ನಡೆಯಿತು. ವಲಯಾಧಿಕಾರಿಯ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಗೆ ವಲಯದ ಎಲ್ಲ ಪ್ರಶಿಕ್ಷಕರು, ಸಂಯೋಜಕರು, ಸಹಯೋಜಕರು, ಸ್ವಯಂಸೇವಕರು ಹಾಗು ಕೇಂದ್ರಗಳ ಮುಖ್ಯ ವ್ಯವಸ್ಥಾಪಕರನ್ನು ಆಹ್ವಾನಿಸಲಾಗಿತ್ತು. ಸಭೆಯನ್ನು, ವಿಸ್ತಾರವಾದ ಅನೇಕ ಅಂಶಗಳನ್ನು ಒಳಗೊಂಡಂತೆ ಆಯೋಜಿಸಲಾಗಿತ್ತು. ವಲಯಾಧಿಕಾರಿ ಸೋ. ಸತ್ಯ ಎನ್. ಮಂಡಲ್‌ರವರು, ನಮ್ಮ ವಲಯದೊಳಗೆ ಮತ್ತು ಗುರುಗಳು ಹಾಗು ಕಮಲೇಶ್ ಭಾಯಿಯವರೊಡನೆ ನಾವು ನಡೆಸುವ ಸಂವಹನದಲ್ಲಿ, ಶಿಸ್ತಿನಿಂದ, ಸಂಹವನದ ಬಗ್ಗೆ ಆಶ್ರಮವು ಸೂಚಿಸಿರುವ ವ್ಯವಸ್ಥೆಯನ್ನನುಸರಿಸಿ, ನಡೆದುಕೊಳ್ಳಬೇಕಾಗಿರುವ ಅನೇಕ ಅಂಶಗಳ ಬಗ್ಗೆ ವಿಚಾರ ಮಂಡಿಸಿದರು. ಸಭೆಯಲ್ಲಿ ಮಾತನಾಡುತ್ತ, ವಲಯಾಧಿಕಾರಿಯವರು ನೆರೆದಿದ್ದ ಪ್ರಶಿಕ್ಷಕರು ಮತ್ತು ಸ್ವಯಂ ಸೇವಕರುಗಳಿಗೆ ಸಹಜಮಾರ್ಗದ ಶಿಸ್ತಿನ ಸಿಪಾಯಿಗಳಂತೆ ಕೆಲಸ ಮಾಡಿರೆಂದು ಮನವಿ ಮಾಡಿದರು.



ಪ್ರಶಿಕ್ಷಕರಿಲ್ಲದ ಕೇಂದ್ರಗಳಲ್ಲಿ ಭಾನುವಾರದ ಮತ್ತು ಬುಧವಾರದ ಸತ್ಸಂಗಗಳನ್ನು ಹೇಗೆ ನಡೆಸಬೇಕೆಂಬುದರ ಬಗ್ಗೆ ಚರ್ಚೆ ನಡೆಸಲಾಯಿತು. ಕೇಂದ್ರದ ಮುಖ್ಯಾಧಿಕಾರಿಗಳು, ಪ್ರಶಿಕ್ಷಕರ ಜವಾಬ್ದಾರಿಯನ್ನು ಹೊತ್ತಿರುವವರು, ಕಳೆದ ವರ್ಷದಲ್ಲಿ ತಾವು ತೆಗೆದುಕೊಂಡ ಉಪಕ್ರಮಗಳು, ಮುನ್ನಡೆಗಳು ಹಾಗು ಸಾಧನೆಗಳ ಬಗ್ಗೆ ವಿಚಾರ ವಿನಿಮಯ ನಡೆಸಿದರು. ವಲಯ ಸಂಯೋಜಕರು ಸಹ ತಮ್ಮ ವಿಶಿಷ್ಟ ಕ್ಷೇತ್ರಗಳ ಅಂದರೆ, ತರಪೇತಿ ಮತ್ತು ಅಭಿವೃದ್ಧಿ, ಯು – ಕನೆಕ್ಟ್, ಸಂಶೋಧನೆ, ಶೈಕ್ಷಣಿಕ, ಆಧ್ಯಾತ್ಮಿಕ ಸಾಧನಾ ಕೇಂದ್ರ (ಕ್ರೆಸ್ಟ್), ಮೌಲ್ಯಗಳ ಶಿಕ್ಷಣ, ಪ್ರಬಂಧ ಲೇಖನ, ಮಾಹಿತಿ ತಂತ್ರಜ್ಞಾನ, ಅಭ್ಯಾಸಿಗಳ ನೋಂದಣಿ, ಸ್ವಯಂ ಸೇವೆಗಳು, ಎಖೋಸ್, ಇತಿಹಾಸ ಯೋಜನೆ ಮತ್ತು ಲೆಕ್ಕ ಪತ್ರಗಳ ಬಗ್ಗೆ ವರದಿ ಸಲ್ಲಿಸಿದರು.

## ಉದಯಪುರ, ರಾಜಸ್ಥಾನ

ಆಗಸ್ಟ್ 3ರಂದು ಉದಯಪುರದಲ್ಲಿ, ಕಮಲೇಶ್‌ಭಾಯ್‌ರವರು ತಿರುಪ್ಪೂರು ಭಂಡಾರದ ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿರುವ, ಎ ಬಿಂದುವಿನ ಮೇಲೆ ಧ್ಯಾನಮಾಡುವ ಹಾಗು ಬಿ ಬಿಂದುವಿನ ಮೇಲೆ ಶುದ್ಧೀಕರಣ ಮಾಡುವ ಬಗ್ಗೆ ಅರಿವು ಮೂಡಿಸುವ ಕಾರ್ಯಾಗಾರವೊಂದನ್ನು ನಡೆಸಲಾಯಿತು. ಕೇಂದ್ರದ ಮುಖ್ಯ ವ್ಯವಸ್ಥಾಪಕರು ನೆರೆದಿದ್ದ 34 ಅಭ್ಯಾಸಿಗಳಿಗೆ ಈ ವಿಧಾನದ ಬಗ್ಗೆ ಮತ್ತು ಎ ಮತ್ತು ಬಿ ಬಿಂದುಗಳ ಸ್ಥಾನಗಳ ಬಗ್ಗೆ ವಿವರಣೆ ನೀಡಿದರು. ಅಭ್ಯಾಸಿಗಳಲ್ಲಿ ಈ ವಿಶೇಷ ತಂತ್ರಗಳ ಬಗ್ಗೆ ಹೆಚ್ಚಿನ ಗ್ರಹಿಕೆಯನ್ನು ಬೆಳೆಸುವುದು ಕಾರ್ಯಾಗಾರದ ಮುಖ್ಯ ಉದ್ದೇಶವಾಗಿದ್ದಿತು. ಕಾರ್ಯಾಗಾರದ ಕೊನೆಯಲ್ಲಿ ಅಭ್ಯಾಸಿಗಳ ಪ್ರಶ್ನೆಗಳಿಗೆ ಉತ್ತರ ಕೊಡುವ ಸಲುವಾಗಿ ಪ್ರಶ್ನೋತ್ತರ ಕಾರ್ಯಕ್ರಮವನ್ನು ನಡೆಸಲಾಯಿತು.



# ಚುಟುಕು ವಾರ್ತೆಗಳು


ಮುತ್ತೂರು

## ತಮಿಳುನಾಡಿನ ಮುತ್ತೂರಿನಲ್ಲಿ ಬುಧವಾರದ ಮೊದಲ ಸತ್ಸಂಗ

ಕಾಂಗೇಯಂ ಕೇಂದ್ರದಿಂದ 18 ಕಿ.ಮೀ ದೂರದಲ್ಲಿರುವ ಮುತ್ತೂರು, ತಮಿಳುನಾಡಿನ ಒಂದು ಪುಟ್ಟ ಪಟ್ಟಣವಾಗಿದೆ. ದೂರದ ಕಾರಣ, ಮುತ್ತೂರಿನ ಆರು ಅಭ್ಯಾಸಿಗಳು ನಿಯತವಾಗಿ ವೈಯಕ್ತಿಕ ಬೈಠಕನ್ನು ತೆಗೆದುಕೊಳ್ಳಲು ಕಠಿಣವಾಗಿದ್ದಿತು. ವಲಯ ವ್ಯವಸ್ಥಾಪಕರಾದ ಟಿ.ವಿ. ವಿಶ್ವನಾಥ ರಾವ್‌ರವರ ಸಲಹೆಯ ಪ್ರಕಾರ, ಕಾಂಗೇಯಂನಿಂದ ಪ್ರಶಿಕ್ಷಕರು ಬೈಠಕ್ ನೀಡಲು ಮುತ್ತೂರಿಗೆ ಹೋಗತೊಡಗಿದರು. ಅಭ್ಯಾಸಿಗಳ ಸಂಖೆಯು 30ಕ್ಕೆ ಏರುತ್ತಲೇ ವಲಯ ವ್ಯವಸ್ಥಾಪಕರು ಬುಧವಾರದಂದು ಅಲ್ಲಿ ಸತ್ಸಂಗ ನಡೆಸಬೇಕಾಗಿ ಸೂಚಿಸಿದರು. ಅಂತೆಯೆ ಅವರು, ಮೊದಲ ಬಾರಿಯ ಸತ್ಸಂಗವನ್ನು ಜೂನ್ 11ರಂದು ಸಂಜೆ 5 ಗಂಟೆಗೆ ನಡೆಸಿಕೊಟ್ಟರು. ಇದರೊಂದಿಗೆ ಗೃಹ ಕೂಟವನ್ನು ಸಹ ನಡೆಸಲಾಯಿತು. ಮುತ್ತೂರಿನ 30 ಹಾಗು ಕಾಂಗೇಯಂನಿಂದ ಕೆಲವು ಅಭ್ಯಾಸಿಗಳು ಇದರಲ್ಲಿ ಭಾಗವಹಿಸಿದರು. ಸತ್ಸಂಗದ ನಂತರ, 'ಸಹಜಮಾರ್ಗದ ಗುರುಗಳು, ಮಿಷನ್, ಪದ್ಧತಿ ಮತ್ತು ಗುರಿ' ಹಾಗು 'ಸಹಜಮಾರ್ಗದ ಅಗತ್ಯ' ಎಂಬ ವಿಷಯಗಳ ಕುರಿತು ಭಾಷಣಗಳಿದ್ದುವು. ಕೆಲವು ಆಕಾಂಕ್ಷಿಗಳು ಸಹಜಮಾರ್ಗವನ್ನು ಸೇರಲು ಆಸಕ್ತಿ ತೋರಿದರು.

## ಅಹಮದಾಬಾದಿನ ಮಣಿನಗರದಲ್ಲಿ ಭಾನುವಾರದ ಸತ್ಸಂಗ

ಗುರುಗಳ ಅನುಮತಿಯೊಂದಿಗೆ, ಅಹಮದಾಬಾದಿನ ನಗರಕೇಂದ್ರವಾದ ಮತ್ತು ಕಕಾರಿಯ ಕೆರೆಯ ಬಳಿಯ ಮಣಿನಗರದಲ್ಲಿ ಸಹ ಭಾನುವಾರದ ಸತ್ಸಂಗವನ್ನು ನಡೆಸಲಾಗುವುದು. ನಗರದಲ್ಲಿ ಸ್ಥಿತ ಅಭ್ಯಾಸಿಗಳಿಗೆ ಇದು ಕೇಂದ್ರವಾಗಿದ್ದು, ಸುಗಮವಾದ ಸ್ಥಳದಲ್ಲಿದೆ. ಆಗಸ್ಟ್ 3ರಂದು ನಡೆದ ಮೊದಲ ಸತ್ಸಂಗದಲ್ಲಿ 60ಕ್ಕಿಂತ ಅಧಿಕ ಸಂಖ್ಯೆಯಲ್ಲಿ ಅಭ್ಯಾಸಿಗಳು ಪಾಲ್ಗೊಂಡಿದ್ದು, ಅವರಲ್ಲಿ 20 ಪ್ರತಿಶತ ಜನರಿಗೆ ವಿವಿಧ ಕಾರಣಗಳಿಂದ ಭಾನುವಾರದ ಸತ್ಸಂಗಕ್ಕೆ ಹಾಜರಾಗಲು ಸಾಧ್ಯವಾಗುತ್ತಿರಲಿಲ್ಲ. ಭಾನುವಾರಗಳಂದು ಆಶ್ರಮಕ್ಕೆ ತಲುಪಲು ಸಾಧ್ಯವಾಗದ ಅಭ್ಯಾಸಿಗಳ ಲಾಭಕ್ಕಾಗಿ ಈ ವ್ಯವಸ್ಥೆ ಮಾಡಲಾಗಿದೆ.

## ಕ್ರೀಡಾಕೂಟ, ಅಹಮದಾಬಾದ್, ಗುಜರಾತ್

ಆಗಸ್ಟ್ 15ರಂದು,ಅಹಮದಾಬಾದಿನ ಅಡಲಜ್ ಯೋಗಾಶ್ರಮದಲ್ಲಿ ಸ್ವಾತಂತ್ರ್ಯೋತ್ಸವದೊಡನೆ ಕ್ರೀಡಾಕೂಟವನ್ನು ಆಚರಿಸಲಾಯಿತು. ಎಲ್ಲ ಅಭ್ಯಾಸಿಗಳನ್ನು ಆಹ್ವಾನಿಸಲಾಗಿದ್ದು ಅವರೆಲ್ಲ ಪಾಲ್ಗೊಂಡರು. ಮುಂಜಾನೆ 7.30ರ ಸತ್ಸಂಗದೊಂದಿಗೆ ಕಾರ್ಯಕ್ರಮವು ಪ್ರಾರಂಭಗೊಂಡಿತು. ಉಪಾಹಾರದ ನಂತರ 9.30ಕ್ಕೆ ಧ್ವಜಾರೋಹಣ ಮಾಡಲಾಯಿತು. 10 ರಿಂದ 1 ಗಂಟೆಯವರೆಗೆ ಮ್ಯೂಸಿಕಲ್ ಚೇರ್, ಕೇರಂ, ಟೇಬಲ್ ಟೆನಿಸ್, ಜಿಗಿತ, ಒಂದು–ನಿಮಿಷದಾಟ, ಗುರಿ ತೋರಿಸುವಾಟ, ನಿಂಬೆ ಮತ್ತು ಚಮಚ, ಗೋಣಿಚೀಲದೋಟ ಮತ್ತು ದಂಪತಿಗಳ ಓಟದಂತಹ ವಿವಿಧ ಕ್ರೀಡೆಗಳನ್ನು ನಡೆಸಿದ ನಂತರ ಮಧ್ಯಾಹ್ನದ ಭೋಜನವಿದ್ದಿತು. ಭಾಗಿಗಳೆಲ್ಲ ಕಾರ್ಯಕ್ರಮವನ್ನು ಬಹುವಾಗಿ ಆನಂದಿಸಿದರು.



ವಾರಣಾಸಿ


ಅಹಮದಾಬಾದ್

## ಅಖಿಲ ಭಾರತ ಪ್ರಬಂಧ ಸ್ಪರ್ಧೆ 2014ರ ಬಗ್ಗೆ ಕಮ್ಮಟ, ವಾರಣಾಸಿ, ಉ.ಪ್ರ

ಸ್ವಯಂಸೇವಕರಿಗೆ ಸೂಚನೆಗಳು ಮತ್ತು ಮಾರ್ಗದರ್ಶನವನ್ನು ನೀಡಲು 12D ವಲಯ ಮಟ್ಟದ ಕಮ್ಮಟವನ್ನು ಜುಲೈ 5ರಂದು ನಡೆಸಲಾಯಿತು. ವಲಯದ 23 ಕೇಂದ್ರಗಳು ಮತ್ತು ಉಪಕೇಂದ್ರಗಳಿಂದ ಸುಮಾರು 60 ಸ್ವಯಂಸೇವಕರು ಕಮ್ಮಟದಲ್ಲಿ ಭಾಗವಹಿಸಿದರು. ಅಂತ್ಯದಲ್ಲಿ ಸ್ಪರ್ಧೆಯ ಸಾಮುಗ್ರಿಗಳನ್ನು ವಿತರಿಸಲಾಯಿತು.

## ಲಾಲ್‌ಪಾನಿಯ, ಜಾರ್ಖಂಡ್

ಜುಲೈ 6ರಂದು 'ಧ್ಯಾನ'ವನ್ನು ಕುರಿತ GITP ಕಾರ್ಯಕ್ರಮವನ್ನು ನಡೆಸಲಾಯಿತು. ಇದರಲ್ಲಿ 22 ಅಭ್ಯಾಸಿಗಳು ಪಾಲ್ಗೊಂಡಿದ್ದರು. ಕಾರ್ಯಕ್ರಮವು ಪರಿಣಾಮಕಾರಿಯಾಗಿದ್ದು ಎಲ್ಲರಿಗೂ ಕಲಿಕೆಯ ಅನುಭವವನ್ನು ನೀಡಿತು. ಈ ಕಾರ್ಯಕ್ರಮವು ಗುರುಗಳ ಕಾಣಿಕೆಯೆಂದು ಎಲ್ಲರಿಗೂ ಭಾಸವಾಯಿತು. ಅಭ್ಯಾಸಿಗಳ ನಡುವೆ ಭ್ರಾತೃತ್ವ ಬೆಳೆಯಲು ಇದು ಸಹಕಾರಿಯಾಯಿತು.


ಲಾಲ್‌ಪಾನಿಯ

## ಸಂದೇಶ ಪ್ರಸಾರ

### ಶೋಲವಂದನ ತಮಿಳುನಾಡು



30 ನೇ ಜುಲೈ 2014 ರಂದು ಶೋಲವಂದನ ಕೇಂದ್ರದಲ್ಲಿ ಒಂದು ಮುಕ್ತಸಭೆಯನ್ನು, ವಲಯ ಪ್ರಮುಖರಾದ ಸೋ. ರಾಮನಾಥನ್ ಮತ್ತು ಇನ್ನಿಬ್ಬರು ಪ್ರಶಿಕ್ಷಕರ ನಾಯಕತ್ವದಲ್ಲಿ ನೆರವೇರಿಸಲಾಯಿತು. ಅಭ್ಯಾಸಿಗಳು ಹಾಗು ನವಾಗತರು ಸೇರಿದಂತೆ ಐವತ್ತಕ್ಕೂ ಹೆಚ್ಚು ಜನ ಪಾಲ್ಗೊಂಡಿದ್ದರು. ಸಾಧನೆ ಮತ್ತು ಇದರ ಪ್ರಾಚೀನಕಾಲದ ಮೂಲಗಳ ಬಗ್ಗೆ ಔಪಚಾರಿಕ ಪರಿಚಯದೊಂದಿಗೆ ಪ್ರಾರಂಭವಾಯಿತು. ನಂತರ ಅರ್ಥಪೂರ್ಣವಾಗಿ ಜರುಗಿದ ಚರ್ಚಾಸತ್ರದಲ್ಲಿ ಜನರು ಸಕ್ರಿಯವಾಗಿ ಭಾಗವಹಿಸಿದರು, ಹಾಗು ನವಾಗತರು ಸಹಜಮಾರ್ಗ ಪದ್ಧತಿಯ ವಿಶಿಷ್ಟತೆಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ತಿಳಿದುಕೊಳ್ಳಲು ಉತ್ಸುಕರಾಗಿದ್ದರು.

### ಗುಜರಾತಿನ ಅಹಮದಾಬಾದ್‌ನಲ್ಲಿ ಶಾಸಕೀಯ ಕೋಶಾಗಾರದಲ್ಲಿಯ ಸಭೆ



ಶಾಸಕೀಯ ಕೋಶಾಗಾರ ಕಾರ್ಯಾಲಯದಲ್ಲಿ ಕೆಲಸ ಮಾಡುತ್ತಿರುವ ನೌಕರರಿಗಾಗಿ ನಮ್ಮ ಸಂಸ್ಥೆಯ ಬಗ್ಗೆ ಮಾಹಿತಿಯನ್ನು ನೀಡಲು ವಿಶೇಷವಾದ ಕಾರ್ಯಕ್ರಮವೊಂದನ್ನು ರಚಿಸಲಾಯಿತು. ಸೋ. ಜಿಗ್ನೇಶರವರಿಗೆ 30 ನಿಮಿಷಗಳ ಕಾಲ ಮಾತನಾಡಲು ಅವಕಾಶ ಕೊಡಲಾಗಿತ್ತು. ವಿಭಾಗೀಯ ಪ್ರಮುಖರ ಅನುಮತಿ ಹಾಗು ಆವಶ್ಯಕ ವ್ಯವಸ್ಥೆಗಳ ನಂತರ ಉಪಲಬ್ಧ ವೇಳೆಯಲ್ಲಿ ಅವರು, ಪದ್ಧತಿಯ ಮತ್ತು ಅದರ ಪರಿಣಾಮಕತ್ವದ ಬಗ್ಗೆ ವಿವರವಾದ ಮಾಹಿತಿಯನ್ನಿತ್ತರು. ಬಹಳಷ್ಟು ಇಚ್ಛುಕರು ಮಿಷನನ್ನು ಸೇರಲು ಹಾಗು ಇಂತಹ ಕಾರ್ಯಕ್ರಮಗಳನ್ನು ನಿರ್ವಹಿಸಲು ತಮ್ಮ ಅಭಿರುಚಿಯನ್ನು ವ್ಯಕ್ತಪಡಿಸಿದರು.

### ಮಂಗಳೂರು, ಕರ್ನಾಟಕ



ಸೋಮವಾರ 11 ನೇ ಆಗಸ್ಟ್ 2014ರಂದು ಮಂಗಳೂರಿನ ಬೆಸೆಂಟ ಮೊದಲ ದರ್ಜೆ ಸಂಜೆ ಕಾಲೇಜಿನಲ್ಲಿ 90 ವಿದ್ಯಾರ್ಥಿಗಳು ಹಾಗು 5 ಶಿಕ್ಷಕರಿಗಾಗಿ ಒಂದು ಮುಕ್ತ ಸಭೆಯನ್ನು ನಡೆಸಲಾಯಿತು. ಶ್ರೋತೃಗಳಿಗೆ ಆಧ್ಯಾತ್ಮದ ಮಹತ್ವ ಹಾಗು ಸಹಜಮಾರ್ಗದ ವೈಶಿಷ್ಟ್ಯಗಳ ಬಗ್ಗೆ ವಿವರಿಸಲಾಯಿತು. ಹನ್ನೊಂದು ವಿದ್ಯಾರ್ಥಿಗಳು ಮತ್ತು ಒಬ್ಬರು ಪ್ರಾಧ್ಯಾಪಕರು ಸಂಸ್ಥೆಯನ್ನು ಸೇರಲು ಅಭಿರುಚಿಯನ್ನು ತೋರಿಸಿದರು. ಇಚ್ಛುಕರಿಗೆ ಕಾಲೇಜಿನ ಆವರಣದಲ್ಲಿ ವೈಯಕ್ತಿಕ ಬೈಠಕುಗಳನ್ನು ಕೊಡುವ ವ್ಯವಸ್ಥೆಮಾಡಲಾಯಿತು.

### ಕುಮ್ಮರಿಕುಂಟ, ತೆಲಂಗಾಣದಲ್ಲಿ ಹೊಸ ಕೇಂದ್ರ



ಕರೀಮನಗರ ಜಿಲ್ಲೆಯಲ್ಲಿ ದೂರದ ಒಳಭಾಗದಲ್ಲಿ ಸ್ಥಿತವಾಗಿರುವ ಕುಮ್ಮರಿಕುಂಟ ಎಂಬಲ್ಲಿ ಹೊಸ ಕೇಂದ್ರವೊಂದಾಗಿದೆ. 1992ರಿಂದ ಈ ಹಳ್ಳಿಯಲ್ಲಿರುವ ನಾಲ್ಕು ಜನ ಅಭ್ಯಾಸಿಗಳು ಸಮೀಪದ ಕೇಂದ್ರವಾದ ಪೆದ್ದಪಲ್ಲಿ ಎಂಬಲ್ಲಿಗೆ ಸತ್ಸಂಗ ಹಾಗು ವೈಯಕ್ತಿಕ ಬೈಠಕುಗಳಿಗೆ ಹೋಗುತ್ತಿದ್ದರು. ಮಾರ್ಚ್ 2014ರಲ್ಲಿ, ವಲಯ 1–ಎ ಯ ಪ್ರಮುಖರಾದ ಸೋ. ಮಧು ಕೋಟಪಲ್ಲಿಯವರು, ತಮ್ಮ ಪೆದ್ದಪಲ್ಲಿಯ ಭೇಟಿಯ ಸಮಯದಲ್ಲಿ ಕುಮ್ಮರಿಕುಂಟದ ಅಭ್ಯಾಸಿಗಳನ್ನು ಭೇಟಿಯಾದಾಗ ಅಲ್ಲಿ ಒಂದು ಕೇಂದ್ರದ ಅವಶ್ಯಕತೆಯ ಬಗ್ಗೆ ಅರಿತುಕೊಂಡರು ಮತ್ತು ರವಿವಾರದ ಸತ್ಸಂಗಗಳನ್ನು ಪ್ರಾರಂಭಿಸಲು ಅನುಮತಿಯನ್ನಿತ್ತರು. ಒಂಬತ್ತನೇ ಆಗಸ್ಟ್‌ರಂದು ವಲಯ ಪ್ರಮುಖ ಮತ್ತು ಅವರ ತಂಡದವರ ಭೇಟಿಯ ವೇಳೆಯಲ್ಲಿ, ಕೇವಲ ಐದು ತಿಂಗಳ ಅವಧಿಯಲ್ಲಿ ಅಭ್ಯಾಸಿಗಳ ಸಂಖ್ಯೆಯು 24 ಆಗಿರುವುದನ್ನು ನೋಡಲು ಉತ್ಸಾಹಪೂರಿತವಾಗಿತ್ತು. ಈ ತಂಡದವರೂ ಸಹ, ಇಲ್ಲಿನ ವಾತಾವರಣವು ಆಧ್ಯಾತ್ಮಿಕವಾಗಿ ಆಕರ್ಷಣವುಳ್ಳದ್ದಾಗಿದೆ ಮತ್ತು ಸೂಕ್ಷ್ಮತಮವಾಗಿದೆ ಎಂದು ಉದ್ಗರಿಸಿದರು.

## ಹುಬ್ಬಳ್ಳಿ ಆಶ್ರಮ, ಕರ್ನಾಟಕ

## ಪ್ರಕಾಶ ಕೇಂದ್ರ










ಹುಬ್ಬಳ್ಳಿಯು ಶೀಘ್ರಗತಿಯಿಂದ ಬೆಳೆಯುತ್ತಿರುವ ಉತ್ತರ ಕರ್ನಾಟಕದಲ್ಲಿಯ ಒಂದು ಪಟ್ಟಣವಾಗಿದ್ದು, ರಸ್ತೆ, ರೈಲ್ವೆ ಹಾಗು ಆಂತರಿಕ ವಿಮಾನಸೇವೆಯ ಒಳ್ಳೆಯ ಸಂಪರ್ಕ ಹೊಂದಿದೆ. ಇಲ್ಲಿಂದ ಇಪ್ಪತ್ತು ಕಿ.ಮೀ ದುರದಲ್ಲಿರುವ ಇದರ ಅವಳಿ ಪಟ್ಟಣವಾದ ಧಾರವಾಡವು ಜಿಲ್ಲಾ ಮುಖ್ಯಾಲಯ ವಾಗಿದೆ.

ಹುಬ್ಬಳ್ಳಿ ಕೇಂದ್ರವು 1997 ರಲ್ಲಿ ಆಗಿನ ಕಾರ್ಯದರ್ಶಿಗಳಾಗಿದ್ದ ಸೋ. ಸರ್ನಾಡ ರವರ ಪ್ರಯತ್ನದಿಂದ ಇಬ್ಬರು ಅಭ್ಯಾಸಿಗಳೊಂದಿಗೆ ಪ್ರಾರಂಭವಾಯಿತು. ಸೋ. ಪಾವಸಕರರವರ ಮನೆಯಲ್ಲಿ, ನಂತರ ಮಹಿಳಾ ವಿದ್ಯಾಪೀಠ ಮತ್ತು ಬ್ಯಾಂಕರ್ಸ್ ಕ್ಲಬ್‌ಗಳಲ್ಲಿ, ಸ್ವಂತದ ಆಶ್ರಮ ಪಡೆಯುವವರೆಗೆ ಸತ್ಸಂಗ ಗಳನ್ನು ನಡೆಸಲಾಗುತ್ತಿತ್ತು. ಆಗ ಸುಮಾರು ಐವತ್ತು ಅಭ್ಯಾಸಿಗಳಿದ್ದರು.

ಪೂಜ್ಯ ಗುರುಗಳು 2002ರಲ್ಲಿ ಆಶ್ರಮದ ಭೂಮಿಯ ನೋಂದಣಿಗಾಗಿ ಹುಬ್ಬಳ್ಳಿಗೆ ಆಗಮಿಸಿದ್ದರು. ಅವರು ರೈಲಿನಿಂದ ಪ್ರಯಾಣಮಾಡಿ, ಈ ಭಾಗದಲ್ಲಿ ಬೆಳಕನ್ನು ಪಸರಿಸಲು ಈ ಕೇಂದ್ರಕ್ಕೆ ಸ್ವಂತದ ಆಶ್ರಮವನ್ನು ಪಡೆಯಲು ಆಶೀರ್ವದಿಸಿದರು. ಆ ಸಂದರ್ಭದಲ್ಲಿ ಅವರು "ಪ್ರತಿಸಲ ನಮ್ಮ ಬಾಬೂಜೀಮಹಾರಾಜರಿಗೆ ಒಂದು ಭೂಭಾಗವನ್ನು ಅರ್ಪಿಸುವಾಗ, ಒಂದು ತರಹದ ಅಂತರಿಕ ಆನಂದ ಉಂಟಾಗುತ್ತದೆ. ಇದು ಕುಟುಂಬದಲ್ಲೊಂದು ಮಗುವನ್ನು ಪಡೆದಂತೆ. ಪ್ರತಿಯೊಂದು ಆಶ್ರಮವು ಗುರುಗಳ ದಿವ್ಯಸ್ಥಾನವಾಗಿದ್ದು ಅವರನ್ನು ನಾವು ಆಶ್ರಮದಲ್ಲಿ ಅವರ ಉಪಸ್ಥಿತಿಗಾಗಿ ಪ್ರಾರ್ಥಿಸುತ್ತೇವೆ ಹಾಗು ಆತನ ಬೆಳಕನ್ನು ಶಾಶ್ವತವಾಗಿ ಜೀವಂತವಾಗಿಯೂ ಶಾಶ್ವತವಾಗಿ ಉಪಲಬ್ಧವಾಗಿರುವಂತೆಯೂ ಜೋಪಾನ ಮಾಡಿಡುತ್ತೇವೆ" ಎಂದರು.

ಆಶ್ರಮವು ಅಂತರ ವಿಮಾನ ನಿಲ್ದಾಣ ಮತ್ತು ಹೊಸ ಬಸ್ ನಿಲ್ದಾಣದಿಂದ 2.5 ಕಿ.ಮೀ. ದೂರದಲ್ಲಿದೆ. 11 ಸೆಂಟ ಆಕಾರದ ಆಶ್ರಮದ ಭೂಭಾಗದಲ್ಲಿ 1400 ಚ.ಅ. ಅಳತೆಯ ಧ್ಯಾನಕಕ್ಷವನ್ನು ಕಟ್ಟಲಾಗಿದೆ. ಇಲ್ಲಿ ಸುಮಾರು 150 ಅಭ್ಯಾಸಿಗಳು ಕುಳಿತುಕೊಳ್ಳಲು ಸ್ಥಳಾವಕಾಶವಿದೆ. ಇದಲ್ಲದೆ, ಆಶ್ರಮದಲ್ಲಿ ಅಡುಗೆಮನೆ, ಊಟದಕಕ್ಷ, ಕಾರ್ಯಾಲಯದ ಕೋಣೆ, ಸ್ವಚ್ಛತಾಗೃಹ ಮತ್ತು ಸ್ನಾನಗೃಹಗಳಿವೆ. ಸುಂದರವಾದ ತೋಟ ಹಾಗು ಮಕ್ಕಳ ಆಟದಸ್ಥಳವಿದೆ.

ಪ್ರತಿ ಎರಡನೆಯ ರವಿವಾರದಂದು ಪೂರ್ಣದಿನದ ಕಾರ್ಯಕ್ರಮವನ್ನು ನಡೆಸಲಾಗುತ್ತದೆ. ನೂರಕ್ಕಿಂತಲೂ ಹೆಚ್ಚುಜನ ಅಭ್ಯಾಸಿಗಳು ರವಿವಾರದ ಸತ್ಸಂಗಕ್ಕೆ ಹಾಜರಿರುತ್ತಾರೆ. ಈ ಕೇಂದ್ರದಲ್ಲಿ ಕರ್ನಾಟಕ ರಾಜ್ಯದಲ್ಲಿಯ ಕೆಲ ಪ್ರಶಿಕ್ಷಣ ಕಾರ್ಯಕ್ರಮಗಳಾಗಿವೆ. ಇದರಲ್ಲಿ ಶಿಕ್ಷಕರಿಗಾಗಿ VBSE ಪ್ರಶಿಕ್ಷಣ ಕಾರ್ಯಕ್ರಮ, ಅಧ್ಯಾಪಕರ ವಿಕಾಸ ಕಾರ್ಯಕ್ರಮ ಮತ್ತು ಪ್ರಕಾಶನ ವಿಭಾಗದ ಕಾರ್ಯಶಾಲೆಗಳು ಕೂಡಿವೆ. ಅಭ್ಯಾಸಿಗಳ ನಿಯಮಿತ ಪ್ರಶಿಕ್ಷಣ, ನಿಬಂಧ ಚಟುವಟಿಕೆಯ ಸಮನ್ವಯ ಸಭೆಗಳು, ಮಿಷನ್ನಿನ ಸಾಹಿತ್ಯದ ಹಂಚಿಕೆ ಮತ್ತು ಉಪಕೇಂದ್ರಗಳಿಗೆ ಗುರುತುಚೀಟಿಗಳ ಹಂಚಿಕೆ ಮುಂತಾದವುಗಳು ಈ ಕೇಂದ್ರದ ಇನ್ನಿತರ ಚಟುವಟಿಕೆಗಳಾಗಿವೆ.

ಈ ಆಶ್ರಮವು ಅಸ್ತಿತ್ವಕ್ಕೆ ಬಂದ ನಂತರ ನವನಗರ, ನವಲಗುಂದ ಮತ್ತು ಕೈಗಾ ಎಂಬ ಮೂರು ಉಪ ಕೇಂದ್ರಗಳನ್ನು ವಿಕಸಿಸಲಾಗಿದೆ. ಗೃಹಕೂಟಗಳು ಮುಕ್ತಸಭೆಗಳು, ಅಭ್ಯಾಸಿ ಪ್ರಶಿಕ್ಷಣ ಕಾರ್ಯಕ್ರಮಗಳನ್ನು ಸಮೀಪದ ಸ್ಥಳಗಳಲ್ಲಿ ನಿಯಮಿತವಾಗಿ ನಡೆಸಲಾಗುತ್ತದೆ.

ಭವಿಷ್ಯದ ವಿಕಾಸವನ್ನು ದೃಷ್ಟಿಯಲ್ಲಿಟ್ಟುಕೊಂಡು 14 ಎಕರೆ ಜಮೀನನ್ನು ಕೊಂಡುಕೊಳ್ಳಲಾಗಿದ್ದು, ಅದರಲ್ಲಿ ಐದು ಎಕರೆ ಮಿಷನ್ನಿಗಾಗಿ ಹಾಗು ಉಳಿದ ಒಂಬತ್ತು ಎಕರೆ ಅಭ್ಯಾಸಿಗಳ ವಸಾಹತಿಗಾಗಿ ಕಾದಿರಿಸಲಾಗಿದೆ. ಈ ಹೊಸ ಜಾಗವು ಈಗಿನ ಆಶ್ರಮದಿಂದ 12 ಕಿ.ಮೀ. ದೂರದಲ್ಲಿದೆ. ನಮ್ಮ ಜಂಟಿ ಕಾರ್ಯದರ್ಶಿಗಳಾದ ಸೋ. ಎ.ಪಿ.ದುರ್ರೈಯವರ ಇತ್ತೀಚಿನ ಭೇಟಿಯಲ್ಲಿ, ಅಭ್ಯಾಸಿ ಮತ್ತು ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ, ಆಶ್ರಮ ಪಕ್ಕದಲ್ಲಿಯ ಅಭ್ಯಾಸಿ ನಿವಾಸಗಳ ಕಟ್ಟಡಗಳನ್ನು ಬೇಗನೆ ನಿರ್ಮಿಸುವ ದೃಷ್ಟಿಯಿಂದ ನಿರ್ಣಾಯಕ ಹೆಜ್ಜೆಯನ್ನು ಹಾಕುವ ನಿರ್ಧಾರಮಾಡಲಾಯಿತು.



To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org

© 2014 Shri Ram Chandra Mission ("SRCM"). All rights reserved. "Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.